ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಬುಧವಾರ, ೧೫, ಏಪ್ರಿಲ್, ೨೦೨೬ (ಚೈತ್ರ, ೨೫, ಶಕವರ್ಷ, ೧೯೪೮)	ಸಂಚಿಕೆ ೭೦
Volume - 161	BENGALURU, WEDNESDAY, 15, APRIL, 2026 (CHAITHRA, 25, SHAKAVARSHA, 1948)	Issue 70

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಶ್ರೀಗಂಧ ಕಾವಲು ಗ್ರಾಮದ ಸ.ನಂ.129ರಲ್ಲಿ 4-00 ಎಕರೆ ಜಮೀನನ್ನು ಶ್ರೀ ಸುಂದರೇಶ್ ಬಿನ್ ಸೂರ್ಯನಾರಾಯಣರಾವ್ ಇವರಿಗೆ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 363 ಎಲ್‌ಜಿಎಕ್ಸ್ 2012, ದಿನಾಂಕ: 22.04.2013 ರನ್ವಯ ಮಂಜೂರು ಮಾಡಿರುವುದನ್ನು ರದ್ದುಪಡಿಸುವ ಬಗ್ಗೆ

ಓದಲಾಗಿದೆ: - 1.ಸರ್ಕಾರದ ಆದೇಶ ಸಂ: ಆರ್‌ಡಿ 431 ಎಲ್‌ಬಿಡಿ 1966 ದಿನಾಂಕ:16.03.1967

2. ಸರ್ಕಾರದ ಆದೇಶ ಸಂಖ್ಯೆ: 198 ಎಲ್‌ಜಿಬಿ 1971 ದಿನಾಂಕ: 20.01.1972

3.ಸರ್ಕಾರದ ಕಾರಣ ಕೇಳುವ ನೋಟಿಸ್ ಸಂಖ್ಯೆ ಆರ್‌ಡಿ 363 ಎಲ್‌ಜಿಎಕ್ಸ್ 2012, ದಿನಾಂಕ:01.04.2017

4. ಶ್ರೀ ಸುಂದರೇಶ್ ಬಿನ್ ಲೇಟ್ ಎಸ್. ಸೂರ್ಯನಾರಾಯಣ ರಾವ್ ಇವರು ದಿನಾಂಕ:09.11.2023 ರಂದು ಸಲ್ಲಿಸಿರುವ ಸಮಜಾಯಿಷಿ

5.ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 363 ಎಲ್‌ಜಿಎಕ್ಸ್ 2012 ದಿನಾಂಕ:15.04.2017

6.ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರ ಕಡತ BUDC-LND0NRTH/216/2023-NORTH-BUR-DC OFFICE ದಿನಾಂಕ:18.06.2024

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಸಾದರಮಂಗಲ ಗ್ರಾಮದಲ್ಲಿನ ಸ.ನಂ.76 ರಲ್ಲಿರುವ 04-00 ಎಕರೆ ಜಮೀನನ್ನು ಶ್ರೀ ಸೂರ್ಯನಾರಾಯಣರಾವ್ ಇವರಿಗೆ ಮಂಜೂರು ಮಾಡಲಾಗಿತ್ತು. ನಂತರದಲ್ಲಿ ಸರ್ಕಾರಿ ಜಮೀನನ್ನು ನೇರವಾಗಿ ಮಂಜೂರು ಮಾಡುವ ಅಧಿಕಾರವು ರಾಜ್ಯ ಸರ್ಕಾರಕ್ಕೆ ಪ್ರದತ್ತವಾಗಿರದೇ ಇರುವ ಹಿನ್ನೆಲೆಯಲ್ಲಿ ಸದರಿ ಮಂಜೂರಾತಿಯ ಕ್ರಮವು ಪ್ರಾರಂಭದಿಂದಲೂ ನಿರರ್ಥಕವೆಂದು (ab initio) ಮನಗಂಡು ದಿನಾಂಕ:17.03.1967 ರಂದು ಜಿಲ್ಲಾಧಿಕಾರಿಗಳಿಗೆ ತಂತಿ ಸಂದೇಶ ಕಳುಹಿಸಿ ಸರ್ಕಾರದಿಂದ ದಿನಾಂಕ:15.02.1967ರ ನಂತರದಲ್ಲಿ ಮಂಜೂರಾದ ಜಮೀನುಗಳಿಗೆ ಸಾಗುವಳಿ

ಚೀಟಿಗಳನ್ನು ನೀಡಬಾರದೆಂದು ಸೂಚನೆಗಳನ್ನು ನೀಡಲಾಗಿತ್ತು. ತದನಂತರ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶ ಸಂಖ್ಯೆ: 198 ಎಲ್‌ಜಿಬಿ 1971 ದಿನಾಂಕ: 20.01.1972 ರಲ್ಲಿ ಸದರಿ ಮಂಜೂರಾತಿಯನ್ನು ರದ್ದುಪಡಿಸಿ ಆದೇಶಿಸಲಾಗಿರುತ್ತದೆ.

ಸದರಿ ಮಂಜೂರಾತಿ ರದ್ದತಿ ಆದೇಶವನ್ನು ಪ್ರಶ್ನಿಸಿ ಅರ್ಜಿದಾರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 3664/1983 ಅನ್ನು ದಾಖಲಿಸಿರುತ್ತಾರೆ. ಅರ್ಜಿದಾರರು ದಿನಾಂಕ:11.08.1989 ರಂದು ನಿಧನರಾಗಿರುತ್ತಾರೆ. ಮಾನ್ಯ ನ್ಯಾಯಾಲಯವು ದಿನಾಂಕ:18.06.1990ರ ಆದೇಶದಲ್ಲಿ ಅರ್ಜಿದಾರರ ಕಾನೂನುಬದ್ಧ ವಾರಸುದಾರರಾದ ಶ್ರೀ ಸುಂದರೇಶ್ ಬಿನ್ ಸೂರ್ಯನಾರಾಯಣರಾವ್ ಇವರಿಗೆ ಸಾಗುವಳಿ ಚೀಟಿ ನೀಡುವಂತೆ ಆದೇಶಿಸಿರುತ್ತದೆ.

ಅರ್ಜಿದಾರರು ಸಲ್ಲಿಸಿದ ಮನವಿಯನ್ನು ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ 142 ಎಲ್‌ಜಿಬಿ 1996 ದಿನಾಂಕ:30.06.1999 ರಲ್ಲಿ impermissibility ಕಾರಣ ನೀಡಿ ಇವರ ಕೋರಿಕೆಯನ್ನು ತಿರಸ್ಕರಿಸಿ ಹಿಂಬರಹ ನೀಡಲಾಗಿದೆ.

ಶ್ರೀ ಸುಂದರೇಶ್ ಬಿನ್ ಸೂರ್ಯನಾರಾಯಣರಾವ್ ಇವರು ರಿಟ್ ಪಿಟಿಷನ್ ಸಂಖ್ಯೆ:3664/1983ರ ಪ್ರಕರಣದಲ್ಲಿ ದಿನಾಂಕ:18.06.1990 ರಂದು ನೀಡಿರುವ ಆದೇಶ ಪಾಲನೆಯಾಗಿರುವುದಿಲ್ಲವೆಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 17665/2006 ಅನ್ನು ದಾಖಲಿಸಿರುತ್ತಾರೆ. ಈ ಪ್ರಕರಣದಲ್ಲಿ ದಿನಾಂಕ:11.01.2007ರಂದು ರಿಟ್ ಪಿಟಿಷನ್ ಸಂಖ್ಯೆ:3664/1983 ರ ಪ್ರಕರಣದಲ್ಲಿ ನೀಡಿರುವ ಆದೇಶ ಪಾಲನೆ ಮಾಡುವಂತೆ ನ್ಯಾಯಾಲಯವು ಆದೇಶಿಸಿರುತ್ತದೆ.

ನಂತರದಲ್ಲಿ ಸರ್ಕಾರದಿಂದ ಮಂಜೂರಿ ಆದೇಶವಾಗಿರುವುದಿಲ್ಲವೆಂದು ರಿಟ್ ಅರ್ಜಿ ಸಂಖ್ಯೆ:5888/2010ಅನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ಅರ್ಜಿದಾರರ ಮನವಿಯನ್ನು ತಿರಸ್ಕರಿಸಿ ಆದೇಶಿಸಿರುತ್ತದೆ.

ಅರ್ಜಿದಾರರು ರಿಟ್ ಅರ್ಜಿ ಸಂಖ್ಯೆ:5888/2010ರಲ್ಲಿ ನೀಡಿರುವ ಆದೇಶವನ್ನು ಪ್ರಶ್ನಿಸಿ ಮಾನ್ಯ ನ್ಯಾಯಾಲಯದಲ್ಲಿ ರಿಟ್ ಅಪೀಲು ಸಂ:3038/2010 ಅನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ದಿನಾಂಕ:06.08.2010 ರಂದು ಅರ್ಜಿದಾರರು ಬೆಂಗಳೂರು ದಕ್ಷಿಣ ತಾಲ್ಲೂಕು, ಸಾದರಮಂಗಲ ಗ್ರಾಮದಲ್ಲಿನ ಸ.ನಂ.76 ರಲ್ಲಿರುವ 04-00 ಎಕರೆ ಜಮೀನಿಗೆ ಬದಲಾಗಿ ಬೇರೆ ಜಮೀನನ್ನು ಮಂಜೂರು ಮಾಡುವಂತೆ ಮನವಿ ಸಲ್ಲಿಸತಕ್ಕದ್ದು ಮತ್ತು ಸರ್ಕಾರವು ನಿಯಮಾನುಸಾರ ಪರಿಶೀಲಿಸುವಂತೆ ಆದೇಶಿಸಿರುತ್ತದೆ.

ಈ ಮಧ್ಯೆ, ಸರ್ಕಾರದಿಂದ ದಿನಾಂಕ: 27.08.2012 ರಂದು ಸರ್ಕಾರದ ಆದೇಶ ಸಂ: ಆರ್‌ಡಿ 431 ಎಲ್‌ಬಿಡಿ 1966 ದಿನಾಂಕ:16.03.1967 ರಲ್ಲಿ ಹೊರಡಿಸಿದ ಆದೇಶವು ಕಾನೂನುಬಾಹಿರವಾಗಿರುವ ಕಾರಣ ಸದರಿಯವರ ಮನವಿಯನ್ನು ತಿರಸ್ಕರಿಸಿರುವುದಾಗಿ ತಿಳಿಸಲಾಗಿತ್ತು.

ಮಾನ್ಯ ನ್ಯಾಯಾಲಯವು ರಿಟ್ ಅಪೀಲು ಸಂ:3038/2010 ರಲ್ಲಿ ದಿನಾಂಕ:06.08.2010 ರಂದು ನೀಡಿದ ಆದೇಶದಂತೆ ನೀಡಿದ ತಮ್ಮ ಅರ್ಜಿಯನ್ನು ಪರಿಗಣಿಸಿಲ್ಲವೆಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ನ್ಯಾಯಾಂಗ ನಿಂದನಾ ಸಂಖ್ಯೆ:605/2012 ಪ್ರಕರಣದಲ್ಲಿ ದಿನಾಂಕ:11.09.2012 ರಂದು ನೀಡಿದ ಆದೇಶ ಪಾಲನೆಯ ಹಿನ್ನೆಲೆಯಲ್ಲಿ ದಿನಾಂಕ:11.03.2013 ರಂದು ಜರುಗಿದ ಸಚಿವ ಸಂಪುಟದ ನಿರ್ಣಯದಂತೆ (ಸಿ.218/2013) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 363 ಎಲ್‌ಜಿಎಕ್ಸ್ 2012, ದಿ: 22.04.2013 ರನ್ವಯ ಬೆಂಗಳೂರು

ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಶ್ರೀಗಂಧ ಕಾವಲು ಗ್ರಾಮದ ಸ.ನಂ.129ರಲ್ಲಿನ 4-00 ಎಕರೆ ಜಮೀನನ್ನು ಅರ್ಜಿದಾರರಿಗೆ ಕೆಲವು ಷರತ್ತುಗಳನ್ನು ವಿಧಿಸಿ ಮಂಜೂರು ಮಾಡಲಾಗಿರುತ್ತದೆ. ಅದರಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆರವರ ನೋಟಿಸ್ ಸಂಖ್ಯೆ: ಎಲ್‌ಎನ್‌ಡಿ (ಎನ್)ಸಿಆರ್:145/12-13 ದಿನಾಂಕ:10.05.2013 ರಂತೆ ಅರ್ಜಿದಾರರಾದ ಶ್ರೀ ಎಸ್. ಸುಂದರೇಶ್ವರವರು ಶಿವಾಜಿನಗರದಲ್ಲಿರುವ ಎಸ್‌ಬಿಎಂ ಖಜಾನೆ ಶಾಖೆಯ ಬ್ಯಾಂಕಿನಲ್ಲಿ ದಿನಾಂಕ:17.07.2013 ರಂದು ಚಲನ ಸಂಖ್ಯೆ 87-208 ರಂತೆ ಲೆಕ್ಕ ಶೀರ್ಷಿಕೆ ಕೋಡ್ 4000-01-0800-0-01 ರನ್ವಯ ರೂ.6,00,00,000-00 (ಆರು ಕೋಟಿ ರೂ.ಗಳು ಮಾತ್ರ) ಪಾವತಿಸಿರುತ್ತಾರೆ.

ಅರ್ಜಿದಾರರು ಸದರಿ ಸರ್ಕಾರಿ ಮಂಜೂರಿ ಆದೇಶದಲ್ಲಿನ ಕೆಲವೊಂದು ಷರತ್ತುಗಳನ್ನು ರದ್ದುಗೊಳಿಸುವಂತೆ ದಿನಾಂಕ:30.04.2013 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ ಇವರಿಗೆ ಲೀಗಲ್ ನೋಟೀಸ್ ನೀಡಿರುತ್ತಾರೆ.

ಈ ಮಧ್ಯೆ ಶ್ರೀ ಸುಂದರೇಶ್ ಬಿನ್ ಸೂರ್ಯನಾರಾಯಣರಾವ್ ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ ರಿಟ್ ಅಪೀಲು ಸಂಖ್ಯೆ:136/2016ರ ಮತ್ತು ರಿಟ್ ಅಪೀಲ್ ಸಂ:267-268/2016ರ ಪ್ರಕರಣದಲ್ಲಿ (ರಿಟ್ ಪಿಟಿಷನ್ ಸಂಖ್ಯೆ:13664/2015ರ ಆದೇಶವನ್ನು ಪ್ರಶ್ನಿಸಿ) ದಿನಾಂಕ:08.07.2016 ರಂದು ಮಾನ್ಯ ನ್ಯಾಯಾಲಯವು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಸಂಬಂಧ ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ಮಂಡಿಸಲಾಗಿತ್ತು.

ದಿನಾಂಕ:22.02.2017ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ ವಿಷಯ ಸಂಖ್ಯೆ. ಸಿ.127/2017ರಲ್ಲಿ ಸಚಿವ ಸಂಪುಟವು ಈ ಕೆಳಕಂಡಂತೆ ತೀರ್ಮಾನ ಕೈಗೊಂಡಿರುತ್ತದೆ.

> "ಚರ್ಚೆಯ ನಂತರ ರಾಜಕೀಯ ಸಂತ್ರಸ್ಥರಾದ ಶ್ರೀ ಸುಂದರೇಶ್ ಬಿನ್ ಸೂರ್ಯನಾರಾಯಣರಾವ್ ಇವರಿಗೆ ಹಾಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಶ್ರೀಗಂಧ ಕಾವಲು ಗ್ರಾಮದ ಸ.ನಂ.129ರಲ್ಲಿನ ಮಂಜೂರಾದ 4-00 ಎಕರೆ ಜಮೀನಿನ ಬದಲಾಗಿ ಇವರಿಗೆ ಬೆಂಗಳೂರು ಹೊರ ವಲಯದಲ್ಲಿ ಅಥವಾ ಇತರೆ ಯಾವುದೇ ಸ್ಥಳದಲ್ಲಿ 04-00 ಎಕರೆ ಕೃಷಿ ಜಮೀನನ್ನು ಮಂಜೂರು ಮಾಡುವ ಕುರಿತು ಮಾನ್ಯ ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯ ಪಡೆದು ವಿಷಯವನ್ನು ಮರುಮಂಡಿಸುವಂತೆ ಸಚಿವ ಸಂಪುಟವು ಇಲಾಖೆಗೆ ನಿರ್ದೇಶಿಸಿತು"

ಅದರಂತೆ ಮಾನ್ಯ ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯವನ್ನು ಕೋರಲಾಯಿತು. ಮಾನ್ಯ ಅಡ್ವೋಕೇಟ್ ಜನರಲ್ ರವರು ದಿನಾಂಕ:15.03.2017 ರಂದು ನೀಡಿದ ತಮ್ಮ ಅಭಿಪ್ರಾಯದಲ್ಲಿ, ಇನ್ನಿತರೆ ಅಂಶಗಳು ಸೇರಿದಂತೆ, ಈ ಪ್ರಕರಣದಲ್ಲಿ ಜಮೀನಿನ ಮಂಜೂರಾತಿ ಪಡೆದವರು ಮೋಸದ ಕ್ಲೇಮು (Fraudulent Claim) ಮಾಡಿ ಜಮೀನಿನ ಮಂಜೂರಾತಿ ಪಡೆದಿರುವ ಕಾರಣಗಳ ಮೇಲೆ ಶ್ರೀ ಸುಂದರೇಶ್‌ರವರಿಗೆ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 363 ಎಲ್‌ಜಿಎಕ್ಸ್ 2012, ದಿ: 22.04.2013 ರನ್ವಯ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಶ್ರೀಗಂಧ ಕಾವಲು ಗ್ರಾಮದ ಸ.ನಂ.129ರಲ್ಲಿನ 4-00 ಎಕರೆ ಜಮೀನಿನ ಮಂಜೂರಾತಿಯನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 25ರಲ್ಲಿ ನಿಗದಿಪಡಿಸಿರುವ ವಿಧಿ ವಿಧಾನವನ್ನು ಅನುಸರಿಸಿ ರದ್ದುಪಡಿಸಲು ಹಾಗೂ ಠೇವಣಿ ಇಟ್ಟ ಮೊತ್ತವನ್ನು ಹಿಂದಿರುಗಿಸಲು ಸರ್ಕಾರದ ಪರಿಶೀಲನೆಗೆ ಒಳಪಡಿಸಬಹುದೆಂದು ತಿಳಿಸಿರುತ್ತಾರೆ.

ದಿನಾಂಕ:24.03.2017ರಂದು ಜರುಗಿದ ಸಚಿವ ಸಂಪುಟವು (ಸಿ:205/2017) "ಮೋಸದ ಕ್ಲೇಮ್ ಮಾಡಿ ಸದರಿ ಮಂಜೂರಾತಿಯನ್ನು ಪಡೆದಿರುವ ಕಾರಣದ ಮೇಲೆ ಶ್ರೀ ಎಸ್ ಸುಂದರೇಶ್ ರವರಿಗೆ

ಒಂದು ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಶ್ರೀಗಂಧದ ಕಾವಲು ಗ್ರಾಮದ ಸರ್ವೆ ನಂ. 129 (ಹಳೇ ಸರ್ವೇ ನಂ.51) ರಲ್ಲಿ 04-00 ಎಕರೆ ಜಮೀನನ್ನು ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 363 ಎಲ್‌ಜಿಎಕ್ಸ್ 2012, ದಿನಾಂಕ: 22.04.2013ರಲ್ಲಿ ಮಂಜೂರು ಮಾಡಿರುವುದನ್ನು ಏಕೆ ರದ್ದುಪಡಿಸಬಾರದು ಎಂದು ಸಮಜಾಯಿಷಿ ಸಲ್ಲಿಸಲು ಅವಕಾಶ ಕಲ್ಪಿಸಿ, ಈ ಬಗ್ಗೆ ಅವರ ಲಿಖಿತ ಹೇಳಿಕೆ ಏನಾದರೂ ಇದ್ದಲ್ಲಿ ಅದನ್ನು 15 ದಿನದೊಳಗೆ ಸಲ್ಲಿಸತಕ್ಕದೆಂದು ಹಾಗೂ ಮುಂದುವರೆದು ಅವರು ಖುದ್ದು ಹೇಳಿಕೆ ನೀಡಲು ಇಚ್ಛಿಸಿದ್ದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆರವರ ಮುಂದೆ ನಿಗಧಿಪಡಿಸಿದ ದಿನಾಂಕ ಮತ್ತು ವೇಳೆಯಲ್ಲಿ ಹಾಜರಾಗಿ ನೀಡಬಹುದೆಂದು ಸಹ ಅರ್ಜಿದಾರರಿಗೆ ತಿಳಿಸಲು ಮತ್ತು ಸದರಿ ಪ್ರಕ್ರಿಯೆ ಪೂರ್ಣಗೊಂಡ ನಂತರ ವಿಷಯವನ್ನು ಪರಿಶೀಲಿಸಿ ಸಚಿವ ಸಂಪುಟದ ಸೂಕ್ತ ತೀರ್ಮಾನಕ್ಕೆ ಮತ್ತೆ ಸಲ್ಲಿಸಲು ಅನುಮೋದನೆ ನೀಡಿರುತ್ತದೆ.

ಸಚಿವ ಸಂಪುಟದ ನಿರ್ಣಯದಂತೆ (ಸಿ.218/2013) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 363 ಎಲ್‌ಜಿಎಕ್ಸ್ 2012, ದಿ: 22.04.2013 ರನ್ವಯ ಮಾಡಿರುವ ಜಮೀನಿನ ಮಂಜೂರಾತಿಯನ್ನು ಏಕೆ ರದ್ದು ಮಾಡಬಾರದು ಎಂಬ ಬಗ್ಗೆ ಅರ್ಜಿದಾರರಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ: ಆರ್‌ಡಿ 363 ಎಲ್‌ಜಿಎಕ್ಸ್ 2012, ದಿ:01.04.2017 ಅನ್ನು ಜಾರಿ ಮಾಡಲಾಗಿರುತ್ತದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 363 ಎಲ್‌ಜಿಎಕ್ಸ್ 2012, ದಿ: 22.04.2013ನ್ವಯ ಶ್ರೀ ಸುಂದರೇಶ್ ಬಿನ್ ಸೂರ್ಯನಾರಾಯಣರಾವ್ ರವರಿಗೆ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಶ್ರೀಗಂಧದ ಕಾವಲು ಗ್ರಾಮದ ಸರ್ವೆ ನಂ. 129 (ಹಳೇ ಸರ್ವೇ ನಂ.51) ರಲ್ಲಿ 04-00 ಎಕರೆ ಜಮೀನನ್ನು ಮಂಜೂರಾತಿ ಮಾಡುವಲ್ಲಿ ಕೆಲವು ಪ್ರಾಧಿಕಾರಗಳು/ಅಧಿಕಾರಿ ನೌಕರರು ಅಧಿಕಾರ ದುರ್ಬಳಕೆ ಮತ್ತು ಕರ್ತವ್ಯಲೋಪ ಮೇಲ್ನೋಟಕ್ಕೆ ಗೋಚರಿಸಿರುವ ಕಾರಣ ಈ ವಿಷಯದ ಬಗ್ಗೆ ಸಮಗ್ರ ತನಿಖೆ ಮಾಡಲು ಮೇಲೆ ಓದಲಾದ ಕ್ರಮ ಸಂಖ್ಯೆ (5)ರಲ್ಲಿ ಕರ್ನಾಟಕ ಲೋಕಾಯುಕ್ತ ಅಧಿನಿಯಮ,1984ರ ಕಲಂ7(2-ಎ) ರಡಿ ಮಾನ್ಯ ಕರ್ನಾಟಕ ಲೋಕಾಯುಕ್ತ ರವರಿಗೆ ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 363 ಎಲ್‌ಜಿಎಕ್ಸ್ 2012 ದಿನಾಂಕ:15.04.2017 ರನ್ವಯ ವಹಿಸಿ ಆದೇಶಿಸಲಾಗಿದ್ದು ಮಾನ್ಯ ಲೋಕಾಯುಕ್ತದಲ್ಲಿ ಪ್ರಕರಣ ಬಾಕಿ ಇರುತ್ತದೆ.

ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ: ಆರ್‌ಡಿ 363 ಎಲ್‌ಜಿಎಕ್ಸ್ 2012, ದಿ:01.04.2017 ಅನ್ನು ಪ್ರಶ್ನಿಸಿ ಅರ್ಜಿದಾರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 14815/2017 ಅನ್ನು ದಾಖಲಿಸಿದ್ದು, ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು, ದಿನಾಂಕ: 13.10.2017 ರಂದು ಆದೇಶ ನೀಡಿರುತ್ತದೆ.

ಸದರಿ ಆದೇಶವನ್ನು ಪ್ರಶ್ನಿಸಿ, ರಿಟ್ ಅಪೀಲು ಸಂಖ್ಯೆ: 6322/2017 ದಾಖಲಿಸಿರುತ್ತಾರೆ**.** ಮಾನ್ಯ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ಸಹ ದಿನಾಂಕ:27.10.2017 ಆದೇಶ ನೀಡಿರುತ್ತದೆ.

ಸದರಿ ಆದೇಶವನ್ನು ಪ್ರಶ್ನಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಿವಿಲ್ ಅಪೀಲ್ ಸಂಖ್ಯೆ: 9580/2018ನ್ನು ದಾಖಲಿಸಿರುತ್ತಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ದಿನಾಂಕ:12.10.2023 ರಂದು ಆದೇಶ ನೀಡಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರಲ್ಲಿ ಅರ್ಜಿದಾರರ ಸಮಜಾಯಿಷಿಯನ್ನು ಪರಿಶೀಲಿಸಿ ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ದಿನಾಂಕ:18.06.2024ರಂದು ವರದಿ ಸಲ್ಲಿಸಿ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಶ್ರೀಗಂಧದ ಕಾವಲು ಗ್ರಾಮದ ಸರ್ವೆ ನಂ. 129 (ಹಳೇ ಸರ್ವೇ ನಂ.51) ರಲ್ಲಿ 04-00 ಎಕರೆ ಜಮೀನಿಗೆ

ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ನ್ಯಾಯಾಂಗ ನಿಂದನಾ ಪ್ರಕರಣ ಸಂಖ್ಯೆ. 176/2017 ರ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು "Post of Disposal of S.L.P" ಎಂದು ಆದೇಶಿಸಿರುವ ಹಿನ್ನೆಲೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ನ್ಯಾಯಾಂಗ ನಿಂದನಾ ಪ್ರಕರಣವನ್ನು ವಜಾಗೊಳಿಸುವ ಕುರಿತು ಹಾಗೂ ಪ್ರಕರಣದ ಸಂಬಂಧ ಕಾನೂನು ರೀತಿಯ ನಿರ್ದೇಶನ/ಅಭಿಪ್ರಾಯ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(3)ರ ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ: ಆರ್‌ಡಿ 363 ಎಲ್‌ಜಿಎಕ್ಸ್ 2012, ದಿ:01.04.2017 ಕ್ಕೆ ಶ್ರೀ ಸುಂದರೇಶ್ ಬಿನ್ ಲೇಟ್ ಎಸ್. ಸೂರ್ಯನಾರಾಯಣ ರಾವ್ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ದಿನಾಂಕ:09.07.2024ರಂದು ಸಮಜಾಯಿಷಿ ಸಲ್ಲಿಸಿ ಸದರಿ ಸಮಜಾಯಿಷಿಯಲ್ಲಿನ ಅಂಶಗಳನ್ನು ಒಪ್ಪಿ ಸರ್ಕಾರದ ಕಾರಣ ಕೇಳುವ ನೋಟೀಸ್ ಅನ್ನು ಹಿಂಪಡೆಯುವಂತೆ ಕೋರಿರುತ್ತಾರೆ. ಪರಿಶೀಲಿಸಲಾಗಿ ಸದರಿಯವರ ಸಮಜಾಯಿಷಿಯಲ್ಲಿ ಪರಿಗಣಿಸುವ ಯಾವುದೇ ಅಂಶಗಳು ಇಲ್ಲದೇ ಇರುವುದರಿಂದ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಶ್ರೀಗಂಧ ಕಾವಲು ಗ್ರಾಮದ ಸ.ನಂ.129ರಲ್ಲಿನ 4-00 ಎಕರೆ ಜಮೀನನ್ನು ಶ್ರೀ ಎಸ್.ಸುಂದರೇಶ್ ಬಿನ್ ಲೇಟ್ ಎಸ್. ಸೂರ್ಯನಾರಾಯಣ ರಾವ್ ಇವರಿಗೆ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 363 ಎಲ್‌ಜಿಎಕ್ಸ್ 2012, ದಿ: 22.04.2013 ರಂತೆ ಮಂಜೂರು ಮಾಡಿರುವುದನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 25 ಉಪನಿಯಮ(1)ಮತ್ತು (2)ರನ್ವಯ ರದ್ದುಪಡಿಸಿ ಎಲ್ಲಾ ಋಣಭಾರಗಳಿಂದ ಮುಕ್ತಗೊಳಿಸಿ ಸರ್ಕಾರದ ಸ್ವಾಧೀನಕ್ಕೆ ಪಡೆಯುವುದು ಮತ್ತು ಅರ್ಜಿದಾರರು ಠೇವಣಿ ಇಟ್ಟ ಮೊತ್ತವನ್ನು ಮರು ಪಾವತಿಸಲು ಸರ್ಕಾರವು ನಿರ್ಣಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ. E-Comp. No.: 1852161 File No.: RD-LGX/382/2023
ಬೆಂಗಳೂರು ದಿನಾಂಕ:18.03.2026

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಶ್ರೀಗಂಧ ಕಾವಲು ಗ್ರಾಮದ ಸ.ನಂ.129ರಲ್ಲಿನ 4-00 ಎಕರೆ ಜಮೀನನ್ನು ಶ್ರೀ ಎಸ್.ಸುಂದರೇಶ್ ಬಿನ್ ಲೇಟ್ ಎಸ್. ಸೂರ್ಯನಾರಾಯಣ ರಾವ್ ಇವರಿಗೆ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 363 ಎಲ್‌ಜಿಎಕ್ಸ್ 2012, ದಿ: 22.04.2013 ರಂತೆ ಮಂಜೂರು ಮಾಡಿರುವುದನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 25 ಉಪನಿಯಮ(1) ಮತ್ತು (2)ರನ್ವಯ ರದ್ದುಪಡಿಸಿ ಆದೇಶಿಸಿದೆ.

ಜಿಲ್ಲಾಧಿಕಾರಿಗಳು ಈ ಕೆಳಕಂಡಂತೆ ಕ್ರಮವಹಿಸತಕ್ಕದ್ದು,

1. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಶ್ರೀಗಂಧ ಕಾವಲು ಗ್ರಾಮದ ಸ.ನಂ.129ರಲ್ಲಿನ 4-00 ಎಕರೆ ಜಮೀನನ್ನು ಶ್ರೀ ಎಸ್.ಸುಂದರೇಶ್ ಬಿನ್ ಲೇಟ್ ಎಸ್. ಸೂರ್ಯನಾರಾಯಣ ರಾವ್ ಇವರಿಗೆ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 363 ಎಲ್‌ಜಿಎಕ್ಸ್ 2012, ದಿನಾಂಕ: 22.04.2013 ರಂತೆ ಮಂಜೂರು ಮಾಡಿರುವ ಜಮೀನನ್ನು ಕೂಡಲೇ ಸರ್ಕಾರದ ಮರುವಶಕ್ಕೆ ಪಡೆಯತಕ್ಕದ್ದು.

2. ಸದರಿ ಜಮೀನನ್ನು ಎಲ್ಲಾ ಋಣಭಾರಗಳಿಂದ ಮುಕ್ತಗೊಳಿಸಿ, ಕಂದಾಯ ದಾಖಲೆಗಳಲ್ಲಿ "ಸರ್ಕಾರ" ಎಂದು ಸೂಕ್ತವಾಗಿ ನಮೂದು ಮಾಡುವುದು ಹಾಗೂ ಒತ್ತುವರಿಯಾಗದಂತೆ ಕ್ರಮವಹಿಸತಕ್ಕದ್ದು.
3. ಮಂಜೂರಾಗಿರುವ ಜಮೀನಿನಲ್ಲಿ ಯಾವುದೇ ರೀತಿಯಲ್ಲಿ ಅತಿಕ್ರಮಣವಾಗಿದ್ದರೆ ಅತಿಕ್ರಮಣ ತೆರವುಗೊಳಿಸಲು ಸೂಕ್ತ ಕ್ರಮವಹಿಸುವುದು.
4. ಅರ್ಜಿದಾರರು ಠೇವಣಿ ಇಟ್ಟ ಮೊತ್ತವನ್ನು ಮರು ಪಾವತಿಸಲು ಕ್ರಮವಹಿಸತಕ್ಕದ್ದು

ಈ ಆದೇಶವನ್ನು ದಿನಾಂಕ:12.03.2026 ರಂದು ಜರುಗಿದ ಸಚಿವ ಸಂಪುಟ ಸಭೆಯ ನಿರ್ಣಯ ಪ್ರಕರಣ ಸಂಖ್ಯೆ: ಸಿ.147/2026 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಹಾಂತಯ್ಯ ಎಸ್ ಹೊಸಮಠ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ-1)

PR-119

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಕಸಬಾ ಹೋಬಳಿ, ಹಿರೇಶಕುನ ಗ್ರಾಮದ ಸರ್ವೆ ನಂ 111 ರಲ್ಲಿನ 0-20 ಎಕರೆ/ಗುಂಟೆ ಜಮೀನನ್ನು ಕಾಂಗ್ರೆಸ್ ಭವನ ಟ್ರಸ್ಟ್ (ರಿ), ಬೆಂಗಳೂರು ಇವರಿಗೆ ಮಂಜೂರು ಮಾಡುವ ಬಗ್ಗೆ

ಓದಲಾಗಿದೆ: - 1.ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಇವರ ಪತ್ರ ಸಂಖ್ಯೆ SMGDC/LND2/LG2/47/2025 (E-860406)ದಿನಾಂಕ: 04.10.2025
2.ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗರವರ ಪತ್ರ ಸಂಖ್ಯೆ ಪ್ರಾಆಕ/ ಎಲ್ ಎನ್‌ಡಿ/ಸಿಆರ್/136/2025-26 ದಿನಾಂಕ:08.10.2025

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ.(1) ರ ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಇವರ ಪತ್ರದಲ್ಲಿ ಟ್ರಸ್ಟಿ, ಕಾಂಗ್ರೆಸ್ ಭವನ ಟ್ರಸ್ಟ್ (ರಿ), ಬೆಂಗಳೂರು ಇವರು ದಿನಾಂಕ: 18.02.2025 ರಂದು ತಹಶೀಲ್ದಾರ್, ಸೊರಬ ತಾಲ್ಲೂಕು ಇವರಿಗೆ ಸಲ್ಲಿಸಿರುವ ಮನವಿಯಲ್ಲಿ ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಕಸಬಾ ಹೋಬಳಿ, ಹಿರೇಶಕುನ ಗ್ರಾಮದ ಸರ್ವೆ ನಂ 111 ರಲ್ಲಿ 1-00 ಎಕರೆ ಜಮೀನನ್ನು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ, ಕಂಪ್ಯೂಟರ್ ತರಬೇತಿ ಹಾಗೂ ಹೊಲಿಗೆ ಕೇಂದ್ರ ಹಾಗೂ ಮೊಬೈಲ್ ದುರಸ್ಥಿ ತರಬೇತಿ ಉದ್ದೇಶಗಳಿಗಾಗಿ ಕಾಂಗ್ರೆಸ್ ಭವನ ಟ್ರಸ್ಟ್ ಇವರಿಗೆ ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮುಂದುವರೆದು, ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕು ಕಸಬಾ ಹೋಬಳಿ ಹಿರೇಶಕುನ ಗ್ರಾಮದ ಸರ್ವೆ ನಂ.111 ರ ಪಹಣಿ ದಾಖಲಾತಿಯಂತೆ ಒಟ್ಟು ವಿಸ್ತೀರ್ಣ 80-29 ಎಕರೆ/ಗುಂಟೆ ಜಮೀನಿದ್ದು, ಈ ಪೈಕಿ 56-11 ಎಕರೆ/ಗುಂಟೆ ಜಮೀನು ಮೂಲತಃ ಕಂದಾಯ ದಾಖಲಾತಿಗಳಂತೆ ದನಗಳಿಗೆ ಮುಫತ್ತು ಎಂಬುದಾಗಿ ದಾಖಲಾಗಿದ್ದು, ಸದರಿ ಜಮೀನಿನ ಪೈಕಿ 1-00 ಎಕರೆ ಜಮೀನನ್ನು ಪ್ರಸ್ತಾಪಿತ ಉದ್ದೇಶಕ್ಕೆ ಗುರುತಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(2) ರ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಇವರ ಪತ್ರದಲ್ಲಿ ಗೋಮಾಳ ಜಮೀನು ಸೇರಿದಂತೆ ನಗರ ಪೌರ ಸರಹದ್ದಿನೊಳಗೆ ಬರುವ ಸರ್ಕಾರಿ ಜಮೀನುಗಳನ್ನು ಯಾವುದೇ ಖಾಸಗಿ ವ್ಯಕ್ತಿ ಅಥವಾ ಖಾಸಗಿ ಸಂಘ ಸಂಸ್ಥೆಗಳಿಗೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಪ್ರಯುಕ್ತ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 27 ರಡಿ ಪ್ರದತ್ತವಾದ ಅಧಿಕಾರದನ್ವಯ ಸರ್ಕಾರದ ಹಂತದಲ್ಲಿ ಮಂಜೂರಾತಿ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳಬಹುದಾಗಿರುತ್ತದೆಂಬ ಅಂಶದೊಂದಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಅದರಂತೆ, ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಮತ್ತು ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ. E-Comp. No.: 1943454 File No.: RD-LGS /11/2025-
ಬೆಂಗಳೂರು ದಿನಾಂಕ:04.03.2026

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಕಸಬಾ ಹೋಬಳಿ, ಹಿರೇಶಕುನ ಗ್ರಾಮದ ಸರ್ವೆ ನಂ 111 ರಲ್ಲಿ 0-20 ಎಕರೆ/ ಗುಂಟೆ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 27 ರಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 22(ಎ) (2)ನ್ನು ಸಡಿಲಿಸಿ, ಪ್ರಸ್ತಾಪಿತ ಜಮೀನಿಗೆ ಪ್ರಚಲಿತ ಕೃಷಿ ಮಾರ್ಗಸೂಚಿ ಮೌಲ್ಯದ ಶೇಕಡಾ 5ರಷ್ಟು ಹಾಗೂ ಇನ್ನಿತರೆ ಶಾಸನಬದ್ಧ ಶುಲ್ಕ ವಿಧಿಸಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ, ಕಂಪ್ಯೂಟರ್ ತರಬೇತಿ ಹಾಗೂ ಹೊಲಿಗೆ ಕೇಂದ್ರ ಹಾಗೂ ಮೊಬೈಲ್ ದುರಸ್ಥಿ ತರಬೇತಿ ಉದ್ದೇಶಗಳಿಗಾಗಿ ಕಾಂಗ್ರೆಸ್ ಭವನ ಟ್ರಸ್ಟ್ (ರಿ) ಬೆಂಗಳೂರು ಇವರಿಗೆ ಮಂಜೂರು ಮಾಡಿ ಸರ್ಕಾರವು ಆದೇಶಿಸಿದೆ.

ಷರತ್ತುಗಳು:-

1. ಮಂಜೂರಾದ ಜಮೀನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಎರಡು ವರ್ಷಗಳ ಅವಧಿಯೊಳಗೆ ಉಪಯೋಗಿಸತಕ್ಕದ್ದು;
2. ಸಂಸ್ಥೆಗೆ ಸದರಿ ಜಮೀನು ಅವಶ್ಯವಿಲ್ಲವೆಂದು ಕಂಡು ಬಂದಲ್ಲಿ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು;
3. ಮಂಜೂರಾದ ಜಮೀನನ್ನು ವಿನಾಶಕಾರಿಯಾದ ಅಥವಾ ಖಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಬಳಸತಕ್ಕದ್ದಲ್ಲ ಹಾಗೂ ಯಾವುದೇ ರೀತಿಯ ಅತಿಕ್ರಮಣವಾಗದಂತೆ ಕ್ರಮವಹಿಸತಕ್ಕದ್ದು;
4. ಮಂಜೂರಾದ ಜಮೀನನ್ನು ಕಂದಾಯ ಇಲಾಖೆಯ ಅನುಮತಿ ಇಲ್ಲದೆ ಮಾರಾಟ ಮಾಡುವುದಾಗಲೀ, ಗುತ್ತಿಗೆ/ಉಪಗುತ್ತಿಗೆ ನೀಡುವುದಾಗಲೀ, ಅಡಮಾನ, ವರ್ಗಾವಣೆ, ದಾನ, ಇತರೆ ಯಾವುದೇ ರೀತಿಯ ಪರಭಾರೆಯನ್ನು ಮಾಡಬಾರದು;
5. ಮಂಜೂರಾದ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಶಾಸನಬದ್ಧವಾಗಿ ಪಡೆಯಬೇಕಾದ ಪರವಾನಗಿಗಳನ್ನು ಸಂಬಂಧಿತ ಪ್ರಾಧಿಕಾರಗಳಿಂದ ಪಡೆಯತಕ್ಕದ್ದು ಹಾಗೂ ನಿಯಾಮಾನುಸಾರ ಪಾವತಿಸಬೇಕಾದ ಎಲ್ಲಾ ರೀತಿಯ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು;
6. ಮಂಜೂರಾತಿ ಜಮೀನಿನ ಮೇಲೆ ಯಾವುದೇ ನ್ಯಾಯಾಲಯದಲ್ಲಿ ದಾವೆ ದಾಖಲಾಗಿದ್ದರೆ ಈ ಮಂಜೂರಾತಿಯು ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ;
7. ಮಂಜೂರಾದ ಜಮೀನಿನ ಯಾವುದೇ ಭಾಗವು ಸಾರ್ವಜನಿಕ ಉದ್ದೇಶಕ್ಕೆ ಅಗತ್ಯವಾಗಿದ್ದಲ್ಲಿ, ಸರ್ಕಾರವು ಸದರಿ ಜಮೀನನ್ನು ಯಾವುದೇ ಪರಿಹಾರ ನೀಡದೇ ಹಿಂತೆಗೆದುಕೊಳ್ಳುವ ಹಕ್ಕನ್ನು ಹೊಂದಿರುತ್ತದೆ;
8. ಮಂಜೂರಾದ ಜಮೀನು 1969 ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳಿಗೆ ಬದ್ಧವಾಗಿರತಕ್ಕದ್ದು. ಸದರಿ ನಿಯಮಗಳ ಉಲ್ಲಂಘನೆಯಾದಲ್ಲಿ ಈ ಮಂಜೂರಾತಿ ಆದೇಶ ತನ್ನಷ್ಟಕ್ಕೆ ತಾನೇ ರದ್ದಾಗುವುದು ಹಾಗೂ ಯಾವುದೇ ಪರಿಹಾರ ನೀಡದೇ ಮಂಜೂರಾದ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯಲಾಗುವುದು;
9. ಮಂಜೂರಾದ ಜಮೀನನ್ನು ಹಸ್ತಾಂತರಿಸುವಾಗ ಜಮೀನಿನ ವಾಸ್ತವ ಪರಿಸ್ಥಿತಿಗಳನ್ನು ಗಮನದಲ್ಲಿರಿಸಿಕೊಂಡು ಜಿಲ್ಲಾಧಿಕಾರಿಗಳು ಪೂರಕವಾದ ಷರತ್ತುಗಳನ್ನು ವಿಧಿಸಬಹುದಾಗಿದೆ;

ಈ ಆದೇಶವನ್ನು ದಿನಾಂಕ:26.02.2026 ರಂದು ಜರುಗಿದ ಸಚಿವ ಸಂಪುಟ ಸಭೆಯ ನಿರ್ಣಯ ಪ್ರಕರಣ ಸಂಖ್ಯೆ: ಸಿ.122/2026 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಹಾಂತಯ್ಯ ಎಸ್ ಹೊಸಮಠ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ-1)

PR-120

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ತುಮಕೂರು ಜಿಲ್ಲೆಯ ಶಿರಾ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು (01) ನೋಟರಿ ಹುದ್ದೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ:

1. ಕಡತ ಸಂಖ್ಯೆ: ಲಾ-ಎಲ್‌ಸಿಎಲ್/354/2025.
2. ಸರ್ಕಾರದ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/354/2025, ದಿನಾಂಕ : 09-03-2026.
3. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಜಿಲ್ಲೆ ರವರ ಕಛೇರಿ ಪತ್ರ ಸಂಖೆ : 1478/2026, ದಿನಾಂಕ : 25-03-2026.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಕಡತದಲ್ಲಿ ತುಮಕೂರು ಜಿಲ್ಲೆಯ ಶಿರಾ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು ನೋಟರಿ ಹುದ್ದೆಯನ್ನು ಸೃಜಿಸಲು ಪ್ರಸ್ತಾಪಿಸಿಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರದಲ್ಲಿ ತುಮಕೂರು ಜಿಲ್ಲೆಯ ಶಿರಾ ಕಂದಾಯ ತಾಲ್ಲೂಕಿಗೆ ಹೆಚ್ಚುವರಿ ನೋಟರಿ ಹುದ್ದೆ ಸೃಜಿಸುವ ಬಗ್ಗೆ ಪರಿಶೀಲಿಸಲು ಕೆಲವು ಅಂಶಗಳಿಗೆ ಮಾಹಿತಿ / ಅಭಿಪ್ರಾಯವನ್ನು ತಿಳಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಜಿಲ್ಲೆ ಇವರನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ದಿನಾಂಕ : 25-03-2026ರ ಪತ್ರದಲ್ಲಿ ಶಿರಾ ಕಂದಾಯ ತಾಲ್ಲೂಕಿನಲ್ಲಿ ಪ್ರಸ್ತುತ ಜನಸಂಖ್ಯೆಯು 5 ಲಕ್ಷಕ್ಕೂ ಹೆಚ್ಚು ಇರುವ ಕಾರಣ ಶಿರಾ ತಾಲ್ಲೂಕಿಗೆ ಒಂದು ಹೆಚ್ಚುವರಿ ನೋಟರಿಯ ಅವಶ್ಯಕತೆ ಇರುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಜಿಲ್ಲೆ ಇವರು ಅಭಿಪ್ರಾಯ ತಿಳಿಸಿರುತ್ತಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಜಿಲ್ಲೆ ಇವರ ಅಭಿಪ್ರಾಯದನ್ವಯ ಮತ್ತು ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ನೋಟರಿಗಳ ನಿಯಮಗಳು, 1956ರ ನಿಯಮ 8(4A) ರನ್ವಯ ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ - ಎಲ್‌ಸಿಎಲ್/354/2025, ಬೆಂಗಳೂರು, ದಿನಾಂಕ : 31-03-2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ತುಮಕೂರು ಜಿಲ್ಲೆಯ ಶಿರಾ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು (01) ನೋಟರಿ ಹುದ್ದೆಯನ್ನು ಸೃಜಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-121

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಬೀದರ್ ಜಿಲ್ಲೆಯ ಬೀದರ್ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು (01) ನೋಟರಿ ಹುದ್ದೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ:

1. ಕಡತ ಸಂಖ್ಯೆ: ಲಾ-ಎಲ್‌ಸಿಎಲ್/118/2026.
2. ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರ ದಿನಾಂಕ : 13-02-2026ರ ನಡವಳಿ

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಕಡತದಲ್ಲಿ ಬೀದರ್ ಜಿಲ್ಲೆಯ ಬೀದರ್ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು ನೋಟರಿ ಹುದ್ದೆಯನ್ನು ಸೃಜಿಸಿ, ನೋಟರಿ ನೇಮಕ ಮಾಡುವ ಬಗ್ಗೆ ಪ್ರಸ್ತಾಪಿಸಿಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ನಡವಳಿಯಲ್ಲಿ ಬೀದರ್ ಜಿಲ್ಲೆಯ ಜಿಲ್ಲಾ ನ್ಯಾಯಾಲಯದಲ್ಲಿ ಹೊಸದಾಗಿ ನೋಟರಿ ಹುದ್ದೆಯನ್ನು ಸೃಜಿಸಿ, ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ನೋಟರಿ ನೇಮಕ ಮಾಡುವಂತೆ ಕೋರಿರುತ್ತಾರೆ.

ಮಾನ್ಯ ಸಚಿವರು ಸಲ್ಲಿಸಿರುವ ನಡವಳಿಯನ್ವಯ ನೋಟರಿ ನಿಯಮಗಳು, 1956ರ ನಿಯಮ 8(4A) ರನ್ವಯ ಹೆಚ್ಚುವರಿ ನೋಟರಿ ಹುದ್ದೆಯನ್ನು ಸೃಜಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ - ಎಲ್‌ಸಿಎಲ್/118/2026,
ಬೆಂಗಳೂರು, ದಿನಾಂಕ : 02-04-2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಾರ್ವಜನಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಬೀದರ್ ಜಿಲ್ಲೆಯ ಬೀದರ್ ಕಂದಾಯ ತಾಲ್ಲೂಕಿಗೆ ಹೆಚ್ಚುವರಿಯಾಗಿ ಒಂದು (01) ನೋಟರಿ ಹುದ್ದೆಯನ್ನು ಸೃಜಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-122

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು ಈ ಸಂಸ್ಥೆಯ ಆಡಳಿತಾಧಿಕಾರಿಯವರ ಅವಧಿಯನ್ನು ವಿಸ್ತರಿಸುವ ಕುರಿತು

ಓದಲಾಗಿದೆ: ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಪತ್ರ ಸಂಖ್ಯೆ: ಆರ್ ಸಿ ಎಸ್/ ಸಿ ಆರ್ ಡಿ/ ಕೆಎಂಸಿ-1/ಚುನಾವಣೆ/02 /2025-26, ದಿನಾಂಕ: 31-03-2026

****

ಪ್ರಸ್ತಾವನೆ

ಮೇಲೆ ಓದಲಾದ ಸಹಕಾರ ಸಂಘಗಳ ನಿಬಂಧಕರ ಪತ್ರದಲ್ಲಿ, **ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು ಈ ಸಂಸ್ಥೆ**ಯ ಆಡಳಿತ ಮಂಡಳಿಯ ಅವಧಿ ದಿನಾಂಕ:21-12-2025 ಕ್ಕೆ ಮುಕ್ತಾಯವಾಗಿದ್ದು, ಸಹಕಾರ ಸಂಘಗಳ ಕಾಯ್ದೆ ರೀತ್ಯಾ ನಿಗದಿತ ಅವಧಿಯೊಳಗೆ ಚುನಾವಣೆ ನಡೆಸಲು ಸಾಧ್ಯವಾಗದ ಕಾರಣ ಆಡಳಿತ ಮಂಡಳಿ ಪುನರ್ ರಚನೆ ಆಗುವ ವರೆಗೆ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 28 ಎ (5) ರನ್ವಯ ಶ್ರೀ ಜಿಯಾವುಲ್ಲಾ, ಭಾ.ಆ.ಸೇ(ನಿ), ಮುಖ್ಯಮಂತ್ರಿಯವರ ಅಪರ ಕಾರ್ಯದರ್ಶಿ, ಮುಖ್ಯಮಂತ್ರಿಯವರ ಸಚಿವಾಲಯ ಇವರನ್ನು ಮುಂದಿನ 3 ತಿಂಗಳ ವರೆಗೆ ಆಡಳಿತಾಧಿಕಾರಿಯನ್ನಾಗಿ ನಿಬಂಧಕರ ಕಛೇರಿಯಿಂದ ನೇಮಿಸಲಾಗಿತ್ತೆಂದು ವರದಿಸಿ, ಸದರಿ ಆಡಳಿತಾಧಿಕಾರಿಯವರ ಅವಧಿಯು ದಿನಾಂಕ:23-03-2026 ಕ್ಕೆ ಮುಕ್ತಾಯವಾಗಿದ್ದು, ಈ ಅಂಶಗಳ ಹಿನ್ನೆಲೆಯಲ್ಲಿ, **ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು** ಈ ಸಂಸ್ಥೆಯ ಆಡಳಿತಾಧಿಕಾರಿಗಳ ಅವಧಿಯನ್ನು ಮುಂದಿನ ಆರು ತಿಂಗಳ ಅವಧಿಗೆ ಅಥವಾ ಚುನಾವಣೆ ನಡೆಯುವ ವರೆಗೆ ವಿಸ್ತರಿಸುವಂತೆ ಕೋರಿ ನಿಬಂಧಕರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 350 ಸಿಎಲ್ಎಸ್ 2025, ಬೆಂಗಳೂರು, ದಿನಾಂಕ: 02-04-2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 121 ರಡಿ ಸರ್ಕಾರಕ್ಕೆ ದತ್ತವಾಗಿರುವ ಅಧಿಕಾರದನ್ವಯ, **ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು** ಇದರ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ:23-03-2026 ರಿಂದ ಮುಂದಿನ ಆರು ತಿಂಗಳ ಅವಧಿಗೆ ಅಥವಾ ಚುನಾವಣೆಯ ಪೂರ್ಣ ಪ್ರಕ್ರಿಯೆ ಮುಕ್ತಾಯಗೊಳ್ಳುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಆಡಳಿತಾಧಿಕಾರಿ ಅವಧಿ ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(**ರಂಗನಾಥ.ಜಿ**)
ಸರ್ಕಾರದ ಅಧೀನ ಕಾರ್ಯದರ್ಶಿ-3
ಸಹಕಾರ ಇಲಾಖೆ

PR-123

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು ಈ ಸಂಸ್ಥೆಯ ಆಡಳಿತಾಧಿಕಾರಿ ಅವಧಿಯನ್ನು ವಿಸ್ತರಿಸುವ ಕುರಿತು.

ಓದಲಾಗಿದೆ: ಸಹಕಾರ ಸಂಘಗಳ ನಿಬಂಧಕರ ಕಛೇರಿ ಪತ್ರ ಸಂಖ್ಯೆ: ಆರ್‌ಸಿ ಎಸ್ /ಸಿಆರ್ ಡಿ/ಕೆಎಂಸಿ-1(ಚುನಾವಣೆ) /02/2025-26, ದಿನಾಂಕ:31-03-2026.

****

ಪ್ರಸ್ತಾವನೆ

ಮೇಲೆ ಓದಲಾದ ಸಹಕಾರ ಸಂಘಗಳ ನಿಬಂಧಕರ ಪತ್ರದಲ್ಲಿ, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು ಈ ಸಂಸ್ಥೆಯಲ್ಲಿ ದಿನಾಂಕ:17-12-2025 ರಂದು ನಡೆಸಲು ನಿಗದಿಯಾಗಿದ್ದ ಆಡಳಿತ ಮಂಡಳಿಯ ಚುನಾವಣೆಯನ್ನು ಮುಂದಿನ ಆರು ತಿಂಗಳುಗಳ ಕಾಲ ಸರ್ಕಾರ ಮುಂದೂಡಿದ ಹಿನ್ನೆಲೆಯಲ್ಲಿ ಈ ಸಂಸ್ಥೆಯ ಆಡಳಿತ ಮಂಡಳಿಯ ಸ್ಥಾನದಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ರ ಪ್ರಕರಣ 28 ಎ (5) ರೀತ್ಯಾ ಶ್ರೀ ಅಮ್ಮಾನ್ ಆದಿತ್ಯ ಬಿಸ್ವಾಸ್, ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರನ್ನು 03 ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ತದನಂತರ ಶ್ರೀ ಅಮ್ಮಾನ್ ಆದಿತ್ಯ ಬಿಸ್ವಾಸ್, ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರ ಬದಲಾಗಿ ಕ್ಯಾಪ್ಟನ್ ಡಾ.ಕೆ.ರಾಜೇಂದ್ರ, ಭಾ.ಆ.ಸೇ. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಬೆಂಗಳೂರು ಇವರನ್ನು ಆಡಳಿತಾಧಿಕಾರಿಯಾಗಿ ಬಾಕಿ ಉಳಿದಿರುವ ಅವಧಿಗೆ ನೇಮಿಸಲಾಗಿತ್ತೆಂದು ನಿಬಂಧಕರು ವರದಿಸಿ, ಆಡಳಿತಾಧಿಕಾರಿಗಳ ಅವಧಿಯು ದಿನಾಂಕ:25-03-2026ಕ್ಕೆ ಮುಕ್ತಾಯವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಮುಂದುವರೆದು, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ.,ಬೆಂಗಳೂರು ಈ ಸಂಸ್ಥೆಯ ಆಡಳಿತ ಮಂಡಳಿ ಚುನಾವಣೆಯನ್ನು ಸರ್ಕಾರ ಈಗಾಗಲೇ ಆರು ತಿಂಗಳ ಅವಧಿಗೆ ಮುಂದೂಡಿರುವ ಹಿನ್ನೆಲೆಯಲ್ಲಿ ಅವಧಿ ಮುಕ್ತಾಯಗೊಂಡಿರುವ ಬ್ಯಾಂಕಿನ ಆಡಳಿತಾಧಿಕಾರಿಗಳ ಅವಧಿಯನ್ನು ವಿಸ್ತರಿಸಲು ಕಸ್ಯಾಡ್ಡ್ ಬ್ಯಾಂಕು ಕೋರಿದ್ದು, ಈ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು ಈ ಸಂಸ್ಥೆಯ ಆಡಳಿತಾಧಿಕಾರಗಳ ಅವಧಿಯನ್ನು ವಿಸ್ತರಿಸುವಂತೆ ಕೋರಿ ನಿಬಂಧಕರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 46 ಸಿಎಲ್ಎಸ್ 2026, ಬೆಂಗಳೂರು, ದಿ:02-04-2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 121 ರಡಿ ಸರ್ಕಾರಕ್ಕೆ ದತ್ತವಾಗಿರುವ ಅಧಿಕಾರದನ್ವಯ **ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು** ಇದರ ಆಡಳಿತಾಧಿಕಾರಿಯ ಅವಧಿಯನ್ನು **ದಿನಾಂಕ:26-03-2026** ರಿಂದ ಮುಂದಿನ ಆರು ತಿಂಗಳುಗಳವರೆಗೆ ಅಥವಾ ಚುನಾವಣೆಯ ಪೂರ್ಣ ಪ್ರಕ್ರಿಯೆ ಮುಕ್ತಾಯಗೊಳ್ಳುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಆಡಳಿತಾಧಿಕಾರಿ ಅವಧಿ ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(**ರಂಗನಾಥ.ಜಿ**)
ಸರ್ಕಾರದ ಅಧೀನ ಕಾರ್ಯದರ್ಶಿ-3
ಸಹಕಾರ ಇಲಾಖೆ

PR-124

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇಲ್ಲಿ ನಡೆದಿವೆ ಎನ್ನಲಾದ ಅವ್ಯವಹಾರ ಮತ್ತು ಅಕ್ರಮ ನೇಮಕಾತಿಗಳು ಹಾಗೂ ಕಂಪನಿಗೆ ಉಂಟಾಗಿದೆ ಎನ್ನಲಾದ ಆರ್ಥಿಕ ನಷ್ಟದ ಕುರಿತು ತನಿಖೆ ನಡೆಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಸಿಐ 80 ಸಿಓಎಫ್ 2025, ದಿನಾಂಕ:14.01.2026 ಮತ್ತು ದಿನಾಂಕ:27.01.2026ರ ತಿದ್ದುಪಡಿ ಆದೇಶ
2. ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿ ಇವರ ಪತ್ರ ಸಂಖ್ಯೆ: ಎಸ್ನಿಸಸಂ/ಆಡಳಿತ/2263/2025-26, ದಿನಾಂಕ:27.01.2026
3. ಶ್ರೀ ಸಿ.ಬಿ.ಪಾಟೀಲ್, ಸದಸ್ಯ ಕಾರ್ಯದರ್ಶಿ ಇವರ ಪತ್ರ ಸಂಖ್ಯೆ: MYSUG/ENV/2025-26/01(17), ದಿನಾಂಕ:11.02.2026
4. ಶ್ರೀ ಸಿ.ಬಿ.ಪಾಟೀಲ್, ಸದಸ್ಯ ಕಾರ್ಯದರ್ಶಿ ಇವರ ಪತ್ರ ಸಂಖ್ಯೆ: MYSUG/ENV/2025-26/01(14), ದಿನಾಂಕ:11.02.2026

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶಗಳಲ್ಲಿ ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ - ಈ ಕಂಪನಿಯಲ್ಲಿ 2021-22ನೇ ಸಾಲಿನಿಂದ ಈವರೆಗೆ ನಡೆದಿವೆ ಎನ್ನಲಾದ ಅವ್ಯವಹಾರಗಳು ಮತ್ತು ನಿಯಮಬಾಹಿರ ಚಟುವಟಿಕೆಗಳು, ಕಂಪನಿಗೆ ಉಂಟಾಗಿದೆ ಎನ್ನಲಾದ ನಷ್ಟ ಮತ್ತು ಅಕ್ರಮ ನೇಮಕಾತಿಗಳ ಆರೋಪಗಳ ದೂರುಗಳ ಕುರಿತು ಪರಿಶೀಲಿಸಿ ವರದಿ ತನಿಖಾ ಸಮಿತಿಯನ್ನು ರಚಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಐ 80 ಸಿಓಎಫ್ 2025, ದಿನಾಂಕ:14.01.2026ರಲ್ಲಿ ನೇಮಿಸಿದ ತನಿಖಾ ಸಮಿತಿಯ ವೆಚ್ಚಗಳನ್ನು ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿಯಿಂದ ಪಾವತಿಸಲು ತದನಂತರ ದಿ ಮೈಸೂರು ಷುಗರ್ ಕಂಪನಿಗೆ ಮರುಪಾವತಿಸುವ ಕುರಿತು ತಿದ್ದುಪಡಿ ಆದೇಶ ಹೊರಡಿಸಲು ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಶ್ರೀ ಶೇಖರ್ ಗಾಯಕ್‌ವಾಡ್ ಅಧ್ಯಕ್ಷರು, ತನಿಖಾ ಸಮಿತಿ ಇವರ ದಿನಾಂಕ:26.01.2026ರ ಪತ್ರದಲ್ಲಿ ದಿ ಮೈಸೂರು ಷುಗರ್ ಕಂಪನಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ವಿಚಾರಣಾ ಸಮಿತಿಗೆ ಶ್ರೀ ಉತ್ತಮ್ ಇಂಡಲ್ಕರ್, ಹಿಂದಿನ ಸಕ್ಕರೆ ನಿರ್ದೇಶಕರು, ಮಹಾರಾಷ್ಟ್ರ, ಇವರನ್ನು ಮತ್ತು ಶ್ರೀ ಕೇಶವ ತೆಲಾಂಗ್, ಹಿಂದಿನ ಸಕ್ಕರೆ ವಿಶೇಷ ಲೆಕ್ಕಪರಿಶೋಧನಾಧಿಕಾರಿ, ಮಹಾರಾಷ್ಟ್ರ, ಇವರನ್ನು ನೇಮಕ ಮಾಡಲು ಕೋರಿದ್ದು, ಸದರಿಯವರನ್ನು ಸದಸ್ಯರನ್ನಾಗಿ ನೇಮಿಸಲು ಸಮಿತಿಯ ಸದಸ್ಯ ಕಾರ್ಯದರ್ಶಿಯವರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ಶ್ರೀ ಶೇಖರ್ ಗಾಯಕ್‌ವಾಡ್ ಅಧ್ಯಕ್ಷರು, ತನಿಖಾ ಸಮಿತಿ ಇವರ ದಿನಾಂಕ:30.01.2026ರ ಪತ್ರದಲ್ಲಿ, ದಿ ಮೈಸೂರು ಷುಗರ್ ಕಂಪನಿಯ ನಡೆದಿದೆ ಎನ್ನಲಾದ ಅವ್ಯವಹಾರಗಳ ತನಿಖಾ ಸಮಿತಿಯ ಅವಧಿಯನ್ನು ದಿನಾಂಕ:30.03.2026ರವರೆಗೆ ವಿಸ್ತರಿಸಲು ಕೋರಿದ್ದು, ಅದರಂತೆ ತನಿಖಾ ಸಮಿತಿಯ ಅವಧಿಯನ್ನು ದಿನಾಂಕ:30.03.2026ರವರೆಗೆ ವಿಸ್ತರಿಸಲು ಸಮಿತಿಯ ಸದಸ್ಯ ಕಾರ್ಯದರ್ಶಿಯವರು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 80 ಸಿಓಎಫ್ 2025,
ಬೆಂಗಳೂರು, ದಿನಾಂಕ:31ನೇ ಮಾರ್ಚ್ 2026

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ - ಈ ಕಂಪನಿಯಲ್ಲಿ 2021-22ನೇ ಸಾಲಿನಿಂದ ಈವರೆಗೆ ನಡೆದಿವೆ ಎನ್ನಲಾದ ಅವ್ಯವಹಾರಗಳು ಮತ್ತು ನಿಯಮಬಾಹಿರ ಚಟುವಟಿಕೆಗಳು, ಕಂಪನಿಗೆ ಉಂಟಾಗಿದೆ ಎನ್ನಲಾದ ನಷ್ಟ ಮತ್ತು ಅಕ್ರಮ ನೇಮಕಾತಿಗಳ ಆರೋಪಗಳ ದೂರುಗಳ ಪರಿಶೀಲಿಸಲು ರಚಿಸಲಾದ ಸಮಿತಿಯ ಅವಧಿಯನ್ನು ದಿನಾಂಕ:30.03.2026ರವರೆಗೆ ವಿಸ್ತರಿಸಿ ಆದೇಶಿಸಿದೆ.

ತನಿಖಾ ಸಮಿತಿಯು ಶ್ರೀ ಉತ್ತಮ್ ಇಂಡಲ್ಕರ್, ಹಿಂದಿನ ಸಕ್ಕರೆ ನಿರ್ದೇಶಕರು ಮಹಾರಾಷ್ಟ್ರ, ಮತ್ತು ಶ್ರೀ ಕೇಶವ ತೆಲಾಂಗ್, ಹಿಂದಿನ ಸಕ್ಕರೆ ವಿಶೇಷ ಲೆಕ್ಕಪರಿಶೋಧನಾಧಿಕಾರಿ, ಮಹಾರಾಷ್ಟ್ರ, ಇವರುಗಳ ಸಹಕಾರವನ್ನು ಪಡೆದು ಕೊಳ್ಳಲು ಅನುಮತಿ ನೀಡಿ ಆದೇಶಿಸಿದೆ.

ಮುಂದುವರೆದು, ತನಿಖಾ ಸಮಿತಿಯ ವೆಚ್ಚಗಳನ್ನು ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಸಂಸ್ಥೆಯಿಂದ ಭರಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪವಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-125

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2025-26ನೇ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ನಿಗದಿಪಡಿಸಿರುವ ಹೆಚ್ಚುವರಿ ಕಬ್ಬು ಬೆಲೆ ಪಾವತಿಗಾಗಿ ಬಿಡುಗಡೆ ಮಾಡಿದ ಮೊತ್ತವನ್ನು ಬಾಗಲಕೋಟೆ ಜಿಲ್ಲಾಧಿಕಾರಿಗಳ PFMS ಖಾತೆಯಲ್ಲಿ ಜಮೆ ಮಾಡುವ ಬಗ್ಗೆ

ಓದಲಾಗಿದೆ: ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಏಕ ಕಡತ ಸಂಖ್ಯೆ: CCDDS/ADMIN/BGT/1/2026-CCDDS-Part(2) { 2120832}

ಪ್ರಸ್ತಾವನೆ:-

ಮೇಲೆ ಓದಲಾದ ಏಕ ಕಡತದಲ್ಲಿ, 2025-26 ನೇ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಒಂದು ಬಾರಿ ಕ್ರಮವಾಗಿ ಪ್ರತಿ ಮೆ.ಟನ್ ಕಬ್ಬಿಗೆ ರೂ.50/- ರಂತೆ ಆರ್ಥಿಕ ನೆರವನ್ನು ಸರ್ಕಾರದಿಂದ ಪಾವತಿಸಲು ಆದೇಶಿಸಲಾಗಿದೆ. ಅದರಂತೆ ಸರ್ಕಾರವು ರೂ.300.00 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಿ ಆದೇಶಿಸಿರುತ್ತದೆ. ಸರ್ಕಾರದ ಆದೇಶದಂತೆ ಬಿಡುಗಡೆಗೊಳಿಸಿರುವ ಅನುದಾನವನ್ನು ಕಾರ್ಖಾನೆಗಳು ಅರೆದಿರುವ/ ಅರೆಯಬಹುದಾದ ಕಬ್ಬಿನ ಪ್ರ,ಮಾಣಕ್ಕೆ ಅನುಗುಣವಾಗಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುವ ಸಂಬಂಧ ಈ ಕಛೇರಿಯ ಆದೇಶ ದಿನಾಂಕ:25.02.2026 ಮತ್ತು 18.03.2026 ರನ್ವಯ ಒಟ್ಟು ರೂ.290,01,28,250/- ಗಳನ್ನು ಮಂಜೂರು ಮಾಡಿ ಬಿಡುಗಡೆಗೊಳಿಸಲಾಗಿತ್ತು. ಬಾಗಲಕೋಟೆ ಮತ ಕ್ಷೇತ್ರದ ಉಪಚುನಾವಣೆಯು ಜರುಗುತ್ತಿರುವುದರಿಂದ ಜಿಲ್ಲೆಯಾದ್ಯಂತ ಮಾದರಿ ನೀತಿ ಸಂಹಿತೆಯು ದಿನಾಂಕ:15.03.2026 ರಿಂದ ಜಾರಿಯಲ್ಲಿರುತ್ತದೆ. ದಿನಾಂಕ:18.03.2026 ರಂದು ಬಿಡುಗಡೆಗೊಳಿಸಿದ ವಿನಿಯೋಗದ ಬಗ್ಗೆ ಸಕ್ಷಮ ಪ್ರಾಧಿಕಾರಿಗಳಿಂದ ಅನುಮತಿ ಪಡೆಯುವ ಕುರಿತು ಸೂಕ್ತ ಮಾರ್ಗದರ್ಶನ ನೀಡುವಂತೆ ಕೋರಿ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಇವರು ದಿನಾಂಕ:20.03.2026 ರ ಪತ್ರದಲ್ಲಿ ಕೋರಿದ್ದು, ಪ್ರಸ್ತುತ 2025-26 ನೇ ಆರ್ಥಿಕ ವರ್ಷವು ಅಂತ್ಯಗೊಳ್ಳುತ್ತಿರುವುದರಿಂದ ಸದರಿ ಅನುದಾನವು ವ್ಯಪಗತವಾಗದಂತೆ ಜಿಲ್ಲಾಧಿಕಾರಿಗಳ ಪಿಡಿ ಖಾತೆಗೆ ಅಥವಾ ಜಿಲ್ಲಾಧಿಕಾರಿಗಳ SB ಖಾತೆಗೆ ವರ್ಗಾವಣೆ ಮಾಡಿಕೊಳ್ಳಲು ಸಹಮತಿಯನ್ನು ನೀಡುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದೆ. ಅದರಂತೆ ಈ ಕೆಳಕಂಡ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಸಿಐ 162 ಎಸ್‌ಜಿಎಫ್ 2026,
ಬೆಂಗಳೂರು, ದಿನಾಂಕ: 27ನೇ ಮಾರ್ಚ್ 2026

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ 2025-26ನೇ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ನಿಗದಿಪಡಿಸಿರುವ ಹೆಚ್ಚುವರಿ ಕಬ್ಬು ಬೆಲೆ ಪಾವತಿಗಾಗಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಆದೇಶ ಸಂಖ್ಯೆ:ಡಿಎಸ್‌ಕೆ / ಎಸ್‌ಜಿಎಫ್ / ಅನುದಾನ-01/2025-26, ದಿನಾಂಕ:18.03.2026ರಲ್ಲಿ ಬಾಗಲಕೋಟೆ ಜಿಲ್ಲಾಧಿಕಾರಿಗಳಿಗೆ ಬಿಡುಗಡೆಗೊಳಿಸಿದ ರೂ.16,34,56,800.00 ಗಳನ್ನು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರ New State PFMS ಖಾತೆಯಲ್ಲಿ ಜಮೆ ಮಾಡಲು ಅನುಮತಿ ನೀಡಿ ಆದೇಶಿಸಿದೆ.

ಮುಂದುವರೆದು, ರೂ.16,34,56,800.00 ಗಳನ್ನು ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರ New State PFMS ಖಾತೆಗೆ ಜಮೆ ಮಾಡುವ ಸಂಬಂಧದ ಬಿಲ್ಲುಗಳನ್ನು ದಿನಾಂಕ:30.03.2026ರೊಳಗಾಗಿ ಖಜಾನೆಗೆ ಪಾವತಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: FD 98/99 EXP-1/2026, Dated:27.03.2026 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪವಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಸಕ್ಕರೆ)

PR-126

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನ್ಯಾಯಾಂಗ ನಿಂದನಾ ಅರ್ಜಿ ಸಂಖ್ಯೆ: 200314/2025 ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯದ ದಿನಾಂಕ:04.02.2026ರ ಆದೇಶದ ಕುರಿತು.

ಓದಲಾಗಿದೆ:
1. ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಇವರ ದಿನಾಂಕ:01.12.2021ರ ಮನವಿ
2. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ಎಂಕೆ/25/2021-22/137, ದಿನಾಂಕ:11.05.2022ರ ಪತ್ರ
3. ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಇವರ ದಿನಾಂಕ:16.05.2022ರ ಪತ್ರ
4. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ಎಂಕೆ/25/2021-22/161, ದಿನಾಂಕ:21.05.2022.
5. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಕಲಬುರಗಿ ಪೀಠವು ರಿಟ್ ಅರ್ಜಿ ಸಂಖ್ಯೆ: 202023/2022 ರಲ್ಲಿ ದಿನಾಂಕ:23.10.2024ರ ಆದೇಶ.
6. ಆಯುಕ್ತರ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ಎಂಕೆ/25/2021-22, ದಿನಾಂಕ:03.01.2025
7. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ಎನ್‌ಎಸ್‌ಎಫ್/13/2022-23, ದಿನಾಂಕ:09.01.2025
8. ಸರ್ಕಾರದ ಅಧೀನ ಕಾರ್ಯದರ್ಶಿ, ಸಕ್ಕರೆ ಮತ್ತು ವನಸ್ಪತಿ ಎಣ್ಣೆಗಳ ನಿರ್ದೇಶನಾಲಯ, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ, ಗ್ರಾಹಕರ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಮಂತ್ರಾಲಯ ನವದೆಹಲಿ ಇವರ ಪತ್ರ ಸಂಖ್ಯೆ: F.25(101)/08/2022-ST (C.N.381660)/102, Dated:17.02.2025
9. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಂಗ ನಿಂದನಾ ಅರ್ಜಿ 200314/2025 ರಲ್ಲಿ ದಿನಾಂಕ:04.02.2026ರಂದು ನೀಡಿರುವ ಆದೇಶ.
10. ಆಯುಕ್ತರ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ಎಂಕೆ/25/2021-22, ದಿನಾಂಕ:25.02.2026.

*****

ಮೇಲೆ ಓದಲಾದ ಕ್ರಮ ಸಂಖ್ಯೆ(1) ರ ಪತ್ರದಲ್ಲಿ, ಹೊಸ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಲು ದಿನಾಂಕ:17.03.2017ರಂದು ಅಂತರ ದೃಢೀಕರಣ ಪತ್ರವನ್ನು ಪಡೆದಿದ್ದು, ಕಾರಣಾಂತರಗಳಿಂದ ಕೇಂದ್ರ ಸರ್ಕಾರದಿಂದ ಐ.ಇ.ಎಂ. ಪಡೆಯಲು ಸಾಧ್ಯವಾಗಿರುವುದಿಲ್ಲವೆಂದು,

ಮತ್ತೊಮ್ಮೆ ಐ.ಇ.ಎಂ ಪಡೆಯಲು ಅಂತರ ಪ್ರಮಾಣ ಪತ್ರ ನೀಡುವಂತೆ ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಇವರು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ, Sugarcane (Control) Order 1966 ಕಲಂ 6 ಬಿ(1)ರನ್ವಯ ಅಂತರ ಪ್ರಮಾಣ ಪತ್ರಕ್ಕೆ ಸಿಂಧುತ್ವದ ಅವಧಿಯು 30 ದಿನಗಳು ಮಾತ್ರ ಆಗಿರುತ್ತದೆ ಎಂದು ಈ ಹಿಂದೆ ದಿನಾಂಕ:17.03.2017ರಂದು ಅಂತರ ಪ್ರಮಾಣ ಪತ್ರ ನೀಡಿದ್ದಾಗ, ಮೆ.ನೀನಾಬಾಯಿ ಶುಗರ್ಸ್ (ಪ್ರೈ) ಲಿ., ಇವರು ಕೇಂದ್ರ ಸರ್ಕಾರದಿಂದ ನಿಗದಿತ 30 ದಿನಗಳ ಅವಧಿಯಲ್ಲಿ ಐ.ಇ.ಎಂ ಪಡೆಯದೇ ಇರುವುದರಿಂದ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ನೀಡಿದ್ದ ಅಂತರ ಪುಮಾಣ ಪತ್ರವು ಅಸಿಂಧು/ ವ್ಯಪಗತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಹೊಸದಾಗಿ ಅರ್ಜಿಯನ್ನು ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಿದಲ್ಲಿ, ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಲಾಗುವುದೆಂದು ಮೆ.ನೀನಾಬಾಯಿ ಶುಗರ್ಸ್ (ಪ್ರೈ) ಲಿ., ಇವರಿಗೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರನ್ನು ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ, ಸರ್ವೆ ನಂ.54/1, ಡೋಕಳೆವಾಡಿ, ಜಾಲಗೇರಿ ಪೋಸ್ಟ್, ತಿಕೋಟ ತಾಲ್ಲೂಕು, ವಿಜಯಪುರ ಜಿಲ್ಲೆ ಇಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಅಂತರ ಪ್ರಮಾಣ ಪತ್ರವನ್ನು ನೀಡುವಂತೆ ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಇವರು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರನ್ನು ಮತ್ತೊಮ್ಮೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(4)ರ ಪತ್ರದಲ್ಲಿ, ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿದ ದಿನಾಂಕದಿಂದ ಅರ್ಜಿಯ ಜೇಷ್ಟತೆಯನ್ನು ಪರಿಗಣಿಸಲಾಗುತ್ತದೆ ಎಂದು ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಇವರಿಗೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ತಿಳಿಸಿರುತ್ತಾರೆ.

i. ಜಂಟಿ ಕೃಷಿ ನಿರ್ದೇಶಕರು, ವಿಜಯಪುರ ಇವರಿಂದ ಪಡೆದ ಕಬ್ಬಿನ ಲಭ್ಯತೆ ಬಗ್ಗೆ ದೃಢೀಕೃತ ಮಾಹಿತಿ,
ii. ಅಂತರ ಅಳೆಯಲು ನಿರ್ಮಿಸಲ್ಪಡುವ ಕಂಬದ ಸ್ಥಳದಲ್ಲಿಯೇ ಕಾರ್ಖಾನೆಯ ಚಿಮಿನಿಯನ್ನು ನಿರ್ಮಿಸುವುದಾಗಿ ದೃಢೀಕರಣ ಸಲ್ಲಿಸತಕ್ಕದ್ದು.
iii. ಜಮೀನಿಗೆ ಸಂಬಂಧಿಸಿದಂತೆ ಪಹಣಿ ಪತ್ರ ಹಾಗೂ ಖರೀದಿ ಮಾಡಿದಲ್ಲಿ ಕರಾರು ಪ್ರತಿಯೊಂದಿಗೆ ಸಲ್ಲಿಸತಕ್ಕದ್ದು.
iv. ಕಾರ್ಖಾನೆಯ MOA & AOA ಪ್ರತಿಗಳನ್ನು ಸಲ್ಲಿಸುವುದು.

ಮೆ.ನೀನಾಬಾಯಿ ಶುಗರ್ಸ್ (ಪ್ರೈ) ಲಿ., ಇವರು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಸಲ್ಲಿಸಿದ್ದ ಮನವಿಯನ್ನು ಪರಿಗಣಿಸಲು ನಿರ್ದೇಶನ ನೀಡುವಂತೆ ಕೋರಿ ಮೆ.ನೀನಾಬಾಯಿ ಶುಗರ್ಸ್ (ಪ್ರೈ) ಲಿ., ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಕಲಬುರಗಿ ಪೀಠದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ:202023/2022 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:23.10.2024ರಂದು ಈ ಕೆಳಕಂಡಂತೆ ಆದೇಶಿಸಿರುತ್ತದೆ:

i. The writ petition is disposed off.

ii. The respondents are directed to consider and pass orders/take appropriate decision on appropriate the petitioners' application at Annexure - C dated 01.12.2021

in accordance with law, within a period of four weeks from the date of receipt of a copy of this order.

iii. Liberty is reserved in favor of the petitioners to submit additional representation along with relevant documents, if any, which shall also be considered by the concerned respondents in accordance with law as stated supra.

ಮೇಲ್ಕಂಡ ಆದೇಶದನ್ವಯ ದಿನಾಂಕ:24.12.2024ರಂದು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ವಿಚಾರಣಾ ಆದೇಶವನ್ನು ಹೊರಡಿಸಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ(6)ರ ಪತ್ರದಲ್ಲಿ, ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಇವರು ಸರ್ವೆ ನಂ.54/1, ಡೋಕಳೆವಾಡಿ ಪೋಸ್ಟ್, ಜಾಲಗೇರಿ ಗ್ರಾಮ, ತಿಕೋಟ ತಾಲ್ಲೂಕು, ವಿಜಯಪುರ ಜಿಲ್ಲೆ ಇಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ಸಂಬಂಧ ದಿನಾಂಕ: 20.02.2017ರಂದು ಸರ್ವೇ ಆಫ್ ಇಂಡಿಯಾ ಇವರು ನೀಡಿರುವ ವರದಿಯನ್ನಾಧರಿಸಿ ಸದರಿ ಕಾರ್ಖಾನೆಗೆ ಕಬ್ಬು (ನಿಯಂತ್ರಣ ಆದೇಶ) 1966 ರ 6 – ಬಿ ರಂತೆ ಅಂತರ ಪ್ರಮಾಣ ಪತ್ರವನ್ನು ನೀಡಲು ಹಾಗೂ ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿದ್ದರು.

ಮೇಲೆ ಓದಲಾದ ಕ್ರಮ ಸಂಖ್ಯೆ (7) ರ ಪತ್ರದಲ್ಲಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:202023/2022ರಲ್ಲಿ, ದಿನಾಂಕ:23.10.2024ರಂದು ಮಾನ್ಯ ನ್ಯಾಯಾಲಯವು ನೀಡಿರುವ ಆದೇಶದಲ್ಲಿನ ನಿರ್ದೇಶನವನ್ನು ಪರಿಗಣಿಸಿ, ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಇವರಿಗೆ ಅಗತ್ಯ ಅನುಮೋದನೆಗಳನ್ನು ನೀಡಲು ಹಾಗೂ ಮೆ.ನಾಡಗೌಡ ರೋಡ್‌ಲೈನ್ಸ್ ಪ್ರೈ ಲಿ, ಜಾಲಗೇರಿ ಗ್ರಾಮ, ತಿಕೋಟ ತಾಲ್ಲೂಕು, ವಿಜಯಪುರ ಜಿಲ್ಲೆ ಇವರಿಗೆ ನೀಡಲಾದ ಐ.ಇ.ಎಂ.ಅನ್ನು ರದ್ದುಪಡಿಸಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೇಂದ್ರ ಸರ್ಕಾರದ ಸಕ್ಕರೆ ನಿರ್ದೇಶನಾಲಯಕ್ಕೆ ಶಿಫಾರಸ್ಸು ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (8)ರ ಪತ್ರದಲ್ಲಿ, ಸಕ್ಕರೆ ಮತ್ತು ವನಸ್ಪತಿ ಎಣ್ಣೆಗಳ ನಿರ್ದೇಶನಾಲಯ, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ, ಗ್ರಾಹಕರ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಮಂತ್ರಾಲಯ ನವದೆಹಲಿ ಇವರು, ಈ ಕೆಳಕಂಡಂತೆ ತಿಳಿಸಿರುತ್ತಾರೆ:

> The Hon'ble Court vide order dated 23.10.2024 has directed the respondents to consider and Pass appropriate orders/ take appropriate decision on the petitioners' application in accordance with law for the case of M/s.Ninabai Sugars Pvt. Ltd.
>
> However, it may be noted that M/s.Ninabai Sugars Pvt. Ltd. after obtaining the distance certificate in 2017 from the state, has not applied to this directorate along with requisite documents for taken on record and their distance certificate got expired as per the Sugarcane Control Order, 1966 as amended.
>
> Further, as per notice no. STK-7/ROC(B)/2018/2 of the office of the Registrar of Companies the M/s. Ninabai Sugars Pvt. Ltd. was dissolved on 21.08.2018 and later, the company was restored on 28.03.2023 vide NCLT order. Consequently, the request regarding a fresh Distance certificate from the company during this period are ineligible for consideration.

Further, as per the Mutation Register dated 25.01.2025, Shri Krishna Tatuba Jadhav chairman of M/s.Neenabai Sugars Pvt. Ltd. sold the land of Survey No. 54/1 in Jalageri village to third party Shri Rakesh Shekhara Tungal on 05.02.2024, where the Chimney of sugar factory need to be constructed as per the location mentioned in DC as there measurement is based on the pillar constructed. As the ownership of land is transferred to someone else. The M/s. Neenabai Sugars Pvt. Ltd. can not establish the sugar factory at the exact location.

Further, it may be noted that M/s.Nadagouda Roadlines Pvt. Ltd has submitted the distance certificate, IEM within the time limit as per the Sugarcane Control Order, 1966 as amended and was approved vide note no. 9 and was Taken on Record vide order dated 18.10.2022 as a new sugar factory dedicated for ethanol with further amendment vide order dated 31.01.2025 for production of sugar with ethanol.

Further, M/s.Nadagouda Roadlines Pvt. Ltd. has complied with relevant rules and regulations, obtained necessary statutory approvals like Consent for Establishment (CFE), Single window approval of state, PESO, NA conversion of Land etc. Also, submitted the progress reports to this deparment vide letter dated 25.04.2024 & 18.07.2024, as well as progress report dated 26.09.2024 from The Secretary to The Government (MSME and Mines), Commerce and Industry, Karnataka.

Based on the above it is clear that M/s.Nadagouda Roadlines Pvt. Ltd. is a new sugar factory and according to Sugarcane control (Order) amendment 2006, the establishment of any new sugar factory is prohibited within a 15 km aerial distance from an existing or another new sugar factory. Further, facts mentioned in para 2, 3 & 4 raises concerns on the seriousness of M/s.Neenabai Sugars Pvt. Ltd. towards establishment of Sugar Factory.

Hence, the request of Cane Commissioner, Karnataka regarding cancellation of IEM of M/s.Nadagouda Roadlines Pvt. Ltd. is not acceded to and it may be advised to direct the M/s.Neenabai Sugars Pvt. Ltd. to apply for fresh distance certificate at new location as per the Sugarcane control (order), 1966 as amended.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಕಲಬುರಗಿ ಪೀಠವು ರಿಟ್ ಅರ್ಜಿ ಸಂಖ್ಯೆ: 202023/2022ರಲ್ಲಿ, ದಿನಾಂಕ:23.10.2024ರಂದು ನೀಡಿರುವ ಆದೇಶವನ್ನು ಅನುಪಾಲನೆ ಮಾಡಿರುವುದಿಲ್ಲವೆಂದು ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಂಗ ನಿಂದನಾ ಅರ್ಜಿ ಸಂಖ್ಯೆ:200314/2025 ಅನ್ನು ದಾಖಲಿಸಿರುತ್ತಾರೆ. ಮೇಲೆ ಓದಲಾದ ಕ್ರಮ ಸಂಖ್ಯೆ (9)ರ ಆದೇಶದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಕೆಳಕಂಡಂತೆ ಆದೇಶಿಸಿರುತ್ತದೆ.

.. this contempt petition deserves to be closed. Accordingly, it is closed. However, the accused is directed to take necessary steps to ensure that the application of the complainant is considered in accordance with law as directed by the learned Single Judge

in,W.P.No.202023 /2022. The same shall be done within a period of four weeks, failing which the complainant is at liberty to seek revival of this contempt petition.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಂಗ ನಿಂದನಾ ಅರ್ಜಿ ಸಂಖ್ಯೆ: 200314/2025 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದನ್ವಯ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಮೇಲೆ ಓದಲಾದ ಕ್ರಮ ಸಂಖ್ಯೆ (10)ರ ಪತ್ರದಲ್ಲಿ, ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಇವರಿಗೆ ಹಿಂಬರಹವನ್ನು ನೀಡಿದ್ದು, ಸದರಿ ಹಿಂಬರಹದಲ್ಲಿ ಕೇಂದ್ರ ಸರ್ಕಾರವು ಈಗಾಗಲೇ ಮೆ.ನಾಡಗೌಡ ರೋಡ್‌ಲೈನ್ಸ್ ಪ್ರೈ ಲಿ, ಜಾಲಗೇರಿ ಗ್ರಾಮ, ತಿಕೋಟ ತಾಲ್ಲೂಕು, ವಿಜಯಪುರ ಜಿಲ್ಲೆ ಇವರಿಗೆ ಐ.ಇ.ಎಂ. ಅನ್ನು ನೀಡಿದ್ದು, ಸದರಿಯವರಿಗೆ ನೀಡಲಾದ ಐ.ಇ.ಎಂ ಅನ್ನು ರದ್ದುಪಡಿಸುವ ಶಿಫಾರಸ್ಸನ್ನು ಕೇಂದ್ರ ಸರ್ಕಾರವು ಅಂಗೀಕರಿಸಿರುವುದಿಲ್ಲವೆಂಬ ಅಂಶವನ್ನು ಹಾಗೂ ಮೆ.ನೀನಾಬಾಯಿ ಶುಗರ್ಸ್ ಲಿ., ಇವರಿಗೆ ಹೊಸ ಸ್ಥಳದಲ್ಲಿ ಅಂತರ ಪ್ರಮಾಣ ಪತ್ರಕ್ಕಾಗಿ ಹೊಸದಾಗಿ ಅರ್ಜಿಯನ್ನು ಸಲ್ಲಿಸಲು ತಿಳಿಸಿರುವ ಕೇಂದ್ರ ಸರ್ಕಾರದ ದಿನಾಂಕ:17.02.2025ರ ಪತ್ರವನ್ನು ಕಳುಹಿಸಿರುತ್ತಾರೆ.

ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಇವರು ಸರ್ವೆ ನಂ.54/1, ಡೋಕಳೆವಾಡಿ, ಪೋಸ್ಟ್ ಜಾಲಗೇರಿ ಗ್ರಾಮ, ತಿಕೋಟ ತಾಲ್ಲೂಕು, ವಿಜಯಪುರ ಜಿಲ್ಲೆ ಇಲ್ಲಿ ಹೊಸದಾಗಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಲು ದಿನಾಂಕ:17.03.2017ರಂದು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಂದ ಅಂತರ ಪ್ರಮಾಣ ಪತ್ರವನ್ನು ನೀಡಲಾಗಿರುತ್ತದೆ. Sugarcane control (order), 1966 ರ ಖಂಡ 6 ಬಿ (1) ರನ್ವಯ ಸದರಿ ಅಂತರ ಪ್ರಮಾಣ ಪತ್ರದ ಅವಧಿಯು 30 ದಿನಗಳಾಗಿರುತ್ತದೆ. ಆದರೆ, ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಕಂಪನಿಯಿಂದ ಈ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ **Industrial Entrepreneur memorandum (I.E.M)** ಪಡೆದುಕೊಂಡಿರುವುದಿಲ್ಲ. 30 ದಿನಗಳ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ಐ.ಇ.ಎಂ. ಅನ್ನು ಪಡೆದುಕೊಂಡಿರದ ಹಿನ್ನೆಲೆಯಲ್ಲಿ, ದಿನಾಂಕ:17.03.2021ರಂದು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಂದ ಪಡೆದ ಅಂತರ ಪ್ರಮಾಣ ಪತ್ರವು Sugarcane control (order), 1966 ರ ಖಂಡ 6 ಬಿ (1) ರಲ್ಲಿ ವಿವರಿಸಿದಂತೆ ಸ್ವಯಂಚಾಲಿತವಾಗಿ ವ್ಯಪಗತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಇವರ ದಿನಾಂಕ:01.12.2021 ರ ಪತ್ರದಲ್ಲಿ ಮತ್ತೊಮ್ಮೆ ಅಂತರ ಪ್ರಮಾಣ ಪತ್ರವನ್ನು ನೀಡಲು ಕೋರಿರುವ ಮನವಿಯನ್ನು ಪರಿಗಣಿಸಲು Sugarcane control (order) 1966 ಮತ್ತು ತಿದ್ದುಪಡಿ ಆದೇಶಗಳಲ್ಲಿ ಅವಕಾಶವಿರುವುದಿಲ್ಲ.

ಅಲ್ಲದೇ, Registrar of Companies ಇವರ ನೋಟೀಸು ಸಂಖ್ಯೆ:STK-7/ROC(B)/2018/2 ರಲ್ಲಿ ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಕಂಪನಿಯ ಮಾನ್ಯತೆಯು ದಿನಾಂಕ:21.08.2018 ರಂದು ರದ್ದುಗೊಂಡಿದ್ದು, (dissolved) ತದನಂತರ ದಿನಾಂಕ:28.03.2023ರಂದು NCLT ಆದೇಶದನ್ವಯ ಪುನರ್ ಸ್ಥಾಪಿತಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ, ದಿನಾಂಕ:21.08.2018 ರಿಂದ 28.03.2023ರ ಅವಧಿಯಲ್ಲಿ ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಕಂಪನಿಯಿಂದ ಯಾವುದೇ ಪ್ರಾಧಿಕಾರಗಳಿಗೆ ಸಲ್ಲಿಸಿದ ಮನವಿ / ಪ್ರಸ್ತಾವನೆ / ಪತ್ರಗಳಿಗೆ ಮಾನ್ಯತೆ ಇರುವುದಿಲ್ಲ. ಈ ಅವಧಿಯಲ್ಲಿ ಕಂಪನಿಯಿಂದ ಹೊಸ ಅಂತರ ಪ್ರಮಾಣ ಪತ್ರವನ್ನು ನೀಡಲು ಕೋರಿರುವ ಮನವಿಯು ಪರಿಗಣನೆಗೆ ಅರ್ಹವಾಗುವುದಿಲ್ಲ.

ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಇವರು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಅಂತರ ಪ್ರಮಾಣ ಪತ್ರವನ್ನು ಪಡೆದ ವಿಜಯಪುರ ಜಿಲ್ಲೆ, ತಿಕೋಟ ತಾಲ್ಲೂಕು, ಜಾಲಗೇರಿ ಗ್ರಾಮದ ನಂ.54/1 ರಲ್ಲಿನ ಜಮೀನಿನನ್ನು ದಿನಾಂಕ:05.02.2024ರಂದು ಶ್ರೀ ರಾಕೇಶ್ ಶೇಖರ್ ತುಂಗಳ್

ಇವರಿಗೆ ಮಾರಾಟ ಮಾಡಿರುತ್ತಾರೆ. Sugarcane control (order) 1966 ಮತ್ತು ತಿದ್ದುಪಡಿ ಆದೇಶಗಳನ್ವಯ ಒಂದು ಸಕ್ಕರೆ ಕಾರ್ಖಾನೆಯಿಂದ ಮತ್ತೊಂದು ಸಕ್ಕರೆ ಕಾರ್ಖಾನೆಯ ನಡುವಿನ ಅಂತರವು ಕನಿಷ್ಟ 15.00 ಕಿ.ಮೀ. ಆಗಿರುತ್ತದೆ. ಇದೇ ನೀತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಸಿಐ 187 ಎಸ್‌ಜಿಎಫ್ 2007, ದಿನಾಂಕ:11.09.2007ರಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ. ಮುಂದುವರಿದು, Sugarcane control (order) 1966 ಮತ್ತು ತಿದ್ದುಪಡಿ ಆದೇಶಗಳನ್ವಯ ಹೊಸದಾಗಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಅಂತರ ಪ್ರಮಾಣ ಪತ್ರವನ್ನು ಪಡೆಯುವುದಕ್ಕಾಗಿ ಒಮ್ಮೆ ಗುರುತಿಸಿದ ಸ್ಥಳವನ್ನು ಬದಲಾಯಿಸಲು ಅಥವಾ ಸ್ಥಳಾಂತರಿಸಲು ಅವಕಾಶವಿರುವುದಿಲ್ಲ. ಹೊಸದಾಗಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಗುರುತಿಸಿ ಅಂತರ ಪ್ರಮಾಣ ಪತ್ರವನ್ನು ಪಡೆದ ಪರ್ಮನೆಂಟ್ ಸಿಮೆಂಟ್ ಪಿಲ್ಲರ್ ಪಾಯಿಂಟ್ ಇರುವ ಜಮೀನಿನನ್ನು ಯಾವುದೇ ವ್ಯಕ್ತಿ ಅಥವಾ ಕಂಪನಿಗೆ ಮಾರಾಟ ಮಾಡಿದಲ್ಲಿ, ಅಂತಹ ಜಮೀನಿನಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಪಡೆದ ಅಂತರ ಪ್ರಮಾಣ ಪತ್ರವು ಸಹಜವಾಗಿಯೇ ಅಸಿಂಧುವಾಗುತ್ತದೆ. ಒಂದು ವೇಳೆ ಈಗಾಗಲೇ ಇರುವ ಪರ್ಮನೆಂಟ್ ಸಿಮೆಂಟ್ ಪಿಲ್ಲರ್ ಪಾಯಿಂಟ್ ಇರುವ ಜಮೀನಿನ ಸ್ಥಳವನ್ನು ಬದಲಾಯಿಸಬೇಕಾದಲ್ಲಿ Sugarcane control (order) 1966 ಮತ್ತು ತಿದ್ದುಪಡಿ ಆದೇಶಗಳನ್ವಯ ಸಕ್ಕರೆ ಕಾರ್ಖಾನೆಗಳ ನಡುವಿನ ಅಂತರವನ್ನು ದೃಢೀಕರಿಸುವ ಸಕ್ಷಮ ಪ್ರಾಧಿಕಾರವಾದ ಸರ್ವೇ ಆಫ್ ಇಂಡಿಯಾದಿಂದ ಹೊಸದಾಗಿ ವರದಿಯನ್ನು ಪಡೆಯಬೇಕಾಗುತ್ತದೆ ಹಾಗೂ ಸರ್ವೇ ಆಫ್ ಇಂಡಿಯಾದಿಂದ ಹೊಸದಾಗಿ ವರದಿಯನ್ನು ಪಡೆಯಬೇಕಾದಲ್ಲಿ ಸಂಬಂಧಿಸಿದ ಅರ್ಜಿದಾರರು / ಕಂಪನಿಯು ಅಂತರ ಪ್ರಮಾಣ ಪತ್ರವನ್ನು ನೀಡಲು ಕೋರಿ ಹೊಸದಾಗಿ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ.

Sugarcane control (order) 1966 ಮತ್ತು ತಿದ್ದುಪಡಿ ಆದೇಶಗಳನ್ವಯ ರಾಜ್ಯ ಸರ್ಕಾರದಿಂದ ಅಂತರ ಪ್ರಮಾಣ ಪತ್ರವನ್ನು ನೀಡಿದ ನಂತರ ಸಕ್ಕರೆ ಕಾರ್ಖಾನೆಗಳ ಸ್ಥಾಪನೆ ಕುರಿತಂತೆ ಐ.ಇ.ಎಂ. ನೀಡಲು, ಐ.ಇ.ಎಂ ಕಾಲಮಿತಿಯನ್ನು ವಿಸ್ತರಿಸಲು, ಪರಿಷ್ಕೃತ ಐ.ಇ.ಎಂ. ನೀಡಲು ಮತ್ತು ಐ.ಇ.ಎಂ. ಅನ್ನು ರದ್ದುಪಡಿಸಲು ಕೇಂದ್ರ ಸರ್ಕಾರದ ಸಕ್ಕರೆ ನಿರ್ದೇಶನಾಲಯವು ಸಕ್ಷಮ ಪ್ರಾಧಿಕಾರವಾಗಿರುತ್ತದೆ. ಸಕ್ಷಮ ಪ್ರಾಧಿಕಾರವಾದ ಕೇಂದ್ರ ಸರ್ಕಾರದ ಸಕ್ಕರೆ ನಿರ್ದೇಶನಾಲಯದ ದಿನಾಂಕ:17.02.2025ರ ಪತ್ರದಲ್ಲಿ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ಎನ್‌ಎಸ್‌ಎಫ್/13/2022-23, ದಿನಾಂಕ:09.01.2025ರಲ್ಲಿನ ಶಿಫಾರಸ್ಸನ್ನು ಪರಿಗಣಿಸಿರುವುದಿಲ್ಲ ಹಾಗೂ ಮೆ.ನೀನಾಬಾಯಿ ಶುಗರ್ಸ್ ಲಿ., ಆದ ತಮಗೆ ಹೊಸ ಸ್ಥಳದಲ್ಲಿ ಅಂತರ ಪ್ರಮಾಣ ಪತ್ರಕ್ಕಾಗಿ ಹೊಸದಾಗಿ ಅರ್ಜಿಯನ್ನು ಸಲ್ಲಿಸಲು ತಿಳಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಲಭ್ಯವಿರುವ ಎಲ್ಲಾ ದಾಖಲೆಗಳು ಮತ್ತು ಸಂಗತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನ್ಯಾಯಾಂಗ ನಿಂದನಾ ಅರ್ಜಿ 200314/2025 ರಲ್ಲಿ ದಿನಾಂಕ:04.02.2026ರಂದು ನೀಡಿದ ಆದೇಶದ ಅನುಪಾಲನೆ ಕುರಿತು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 130 ಸಿಐಎಲ್ 2025,
ಬೆಂಗಳೂರು, ದಿನಾಂಕ:27ನೇ ಮಾರ್ಚ್ 2026

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಇವರು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ದಿನಾಂಕ:01.12.2021ರಂದು ಸಲ್ಲಿಸಿದ ಮನವಿಯನ್ನು ಪರಿಗಣಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. Sugarcane control (order) 1966 ಮತ್ತು ತಿದ್ದುಪಡಿ ಆದೇಶಗಳನ್ವಯ ಐ.ಇ.ಎಂ. ನೀಡಲು, ಐ.ಇ.ಎಂ ಕಾಲಮಿತಿಯನ್ನು ವಿಸ್ತರಿಸಲು, ಪರಿಷ್ಕೃತ ಐ.ಇ.ಎಂ. ನೀಡಲು

ಮತ್ತು ಐ.ಇ.ಎಂ. ಅನ್ನು ರದ್ದುಪಡಿಸಲು ಸಕ್ಷಮ ಪ್ರಾಧಿಕಾರವಾದ ಕೇಂದ್ರ ಸರ್ಕಾರದ ಸಕ್ಕರೆ ನಿರ್ದೇಶನಾಲಯವು ಪತ್ರ ಸಂಖ್ಯೆ: F.25(101)/08/2022-ST (C.N.381660) /102, Dated:17.02.2025ರ ಪತ್ರದಲ್ಲಿ ನಿರ್ದೇಶಿಸಿರುವಂತೆ, ಸಕ್ಕರೆ ಕಾರ್ಖಾನೆಯನ್ನು ಹೊಸ ಸ್ಥಳದಲ್ಲಿ ಸ್ಥಾಪಿಸಲು Sugarcane control (order) 1966 ಮತ್ತು ತಿದ್ದುಪಡಿಗಳನ್ವಯ ನಿಯಮಾನುಸಾರ ಅಗತ್ಯ ದಾಖಲೆಗಳೊಂದಿಗೆ ಅಂತರ ಪ್ರಮಾಣ ಪತ್ರಕ್ಕಾಗಿ ಹೊಸದಾಗಿ ಅರ್ಜಿಯನ್ನು ಸಲ್ಲಿಸುವಂತೆ ಮೆ.ನೀನಾಬಾಯಿ ಶುಗರ್ಸ್ ಪ್ರೈ ಲಿ., ಇವರಿಗೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪವಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-127

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ದೀರ್ಘಾವಧಿಗೆ ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ಗುತ್ತಿಗೆ ಒಪ್ಪಂದದ ಷರತ್ತು ಮತ್ತು ನಿಬಂಧನೆಗಳನ್ನು ಅನುಪಾಲನೆ ಮಾಡಿರುವ ಕುರಿತು ಪರಿಶೀಲಿಸಲು ವಿಚಾರಣಾ ಸಮಿತಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ:
1. ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಟಿಪ್ಪಣಿ ಸಂಖ್ಯೆ: MTSA/M/305/2025-26, Dated:05.02.2026
2. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ಲೀಸ್/01/2025-26, ದಿನಾಂಕ:09.02.2026.

******

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಟಿಪ್ಪಣಿಯಲ್ಲಿ ರಾಜ್ಯದಲ್ಲಿ 2007-08 ರಿಂದ ವಿವಿಧ ಅವಧಿಯಲ್ಲಿ ಒಟ್ಟು 10 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಲೀಸ್/ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ ಎಂದು ಸರ್ಕಾರದ ಆದೇಶಗಳನ್ವಯ ಸದರಿ ಲೀಸ್/ಗುತ್ತಿಗೆಯನ್ನು ವಿವಿಧ ಷರತ್ತುಗಳೊಂದಿಗೆ ಅಂದರೆ ಗುತ್ತಿಗೆಯ ಮೊತ್ತ ಕಾರ್ಖಾನೆಯ ವಿಸ್ತರಣೆ ಇತ್ಯಾದಿಗಳನ್ನು ನಿಗದಿಪಡಿಸಲಾಗಿದ್ದು, ಈ ರೀತಿ ಗುತ್ತಿಗೆ ಪಡೆದಿರುವ ಹಲವಾರು ಖಾಸಗಿ ಕಂಪನಿಗಳವರು ನಿಬಂಧನೆಗಳು ಮತ್ತು ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿಲ್ಲ ಎಂದು ದೂರುಗಳು ಬರುತ್ತಿರುವುದರಿಂದ, ರಾಜ್ಯದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಗುತ್ತಿಗೆ ಪಡೆದಿರುವ ಖಾಸಗಿಯವರು ಗುತ್ತಿಗೆಯ ನಿಬಂಧನೆ ಮತ್ತು ಷರತ್ತುಗಳನ್ನು ಪಾಲಿಸಿರುವ ಬಗ್ಗೆ ವಿವರವಾಗಿ ಪರಿಶೀಲಿಸಿ ಕೂಡಲೇ ವರದಿ ನೀಡುವಂತೆ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಸೂಚಿಸಿದ್ದರು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ, ಜಿ.ಎಂ ಶುಗರ್ ಅಂಡ್ ಎನರ್ಜಿ ಲಿ., (ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು) ಸಂಗೂರು, ಹಾವೇರಿ ಜಿಲ್ಲೆ ಈ ಕಾರ್ಖಾನೆಯು ಗುತ್ತಿಗೆ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿರುವ ಬಗ್ಗೆ ಮತ್ತು ಕಬ್ಬು ಬೆಳೆಗಾರರ ಸಂಘವು ಪ್ರಸ್ತಾಪಿಸಿರುವ ಅಂಶಗಳ ಬಗ್ಗೆ ದಿನಾಂಕ:17.01.2026 ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ, ಮೆ.ಜಿ.ಎಂ ಶುಗರ್ ಅಂಡ್ ಎನರ್ಜಿ ಲಿ.,

(ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು) ಸಂಗೂರು, ಹಾವೇರಿ ಜಿಲ್ಲೆ - ಈ ಕಾರ್ಖಾನೆಯನ್ನು ಹೊರತುಪಡಿಸಿ ಇನ್ನುಳಿದಂತೆ ಈ ಕೆಳಕಂಡ 09 ಸಹಕಾರಿ ಸಕ್ಕರೆ ಕಾರ್ಖಾನೆಗಳ ಗುತ್ತಿಗೆ ಒಪ್ಪಂದದ ಷರತ್ತು ಮತ್ತು ನಿಬಂಧನೆಗಳನ್ನು ಪಾಲನೆ ಮಾಡಿರುವ ಮತ್ತು ಉಲ್ಲಂಘನೆಯಾಗಿರುವ ಬಗ್ಗೆ ಪರಿಶೀಲಿಸಿ, ಸ್ಪಷ್ಟ ಅಭಿಪ್ರಾಯದೊಂದಿಗೆ ಕಾರ್ಖಾನೆವಾರು ವರದಿಯನ್ನು ಸಲ್ಲಿಸಲು ವಿಚಾರಣಾ ಸಮಿತಿಯನ್ನು ರಚಿಸಲು ಮತ್ತು ಸದರಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರ ಪ್ರಯಾಣಕ್ಕೆ ಮತ್ತು ವಸತಿಗೆ ತಗಲುವ ವೆಚ್ಚಗಳನ್ನು ಎಸ್ . ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿ ಇವರಿಂದ ಭರಿಸಲು ಅನುಮತಿ ನೀಡಿ ಆದೇಶಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿರುತ್ತಾರೆ.

ಕ್ರಮ ಸಂಖ್ಯೆ	ಕಾರ್ಖಾನೆಯ ಹೆಸರು	ಗುತ್ತಿಗೆದಾರರ ಹೆಸರು
1	ಮೃಡಗಿರಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಮುಂಡರಗಿ, ಗದಗ ಜಿಲ್ಲೆ	ಮೆ.ವಿಜಯನಗರ ಶುಗರ್ಸ್ ಲಿ., ಹೈದ್ರಾಬಾದ್
2	ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಶ್ರೀನಿವಾಸಪುರ, ಚೆನ್ನರಾಯಪಟ್ಟಣ ತಾ., ಹಾಸನ ಜಿಲ್ಲೆ	ಮೆ. ಚಾಮುಂಡೇಶ್ವರಿ ಶುಗರ್ಸ್ ಲಿ., ಬೆಂಗಳೂರು
3	ಶ್ರೀ ಧನಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರಾಮದುರ್ಗ, ಬೆಳಗಾವಿ ಜಿಲ್ಲೆ	ಮೆ. ಇ.ಐ.ಡಿ ಪ್ಯಾರಿ (ಇಂಡಿಯಾ) ಶುಗರ್ಸ್ ಲಿ., ಬೆಂಗಳೂರು
4	ರಾಯಬಾಗ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ರಾಯಬಾಗ್, ಬೆಳಗಾವಿ ಜಿಲ್ಲೆ	ಮೆ. ರೇಣುಕಾ ಶುಗರ್ಸ್ ಲಿ., ಬೆಳಗಾವಿ
5	ಶ್ರೀ ಭಾಗ್ಯಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಖಾನಾಪೂರ, ಬೆಳಗಾವಿ ಜಿಲ್ಲೆ	ಮೆ. ಲೈಲಾ ಶುಗರ್ಸ್ ಲಿ., ವಿಜಯವಾಡ , ಆಂಧ್ರಪ್ರದೇಶ
6	ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಭೂಸನೂರ, ಆಳಂದ ತಾ., ಕಲಬುರ್ಗಿ ಜಿಲ್ಲೆ	ಮೆ. ಎನ್.ಎಸ್.ಎಲ್ ಶುಗರ್ಸ್ ಲಿ., ಬೆಂಗಳೂರು
7	ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ, ಪಾಂಡವಪುರ, ಮಂಡ್ಯ ಜಿಲ್ಲೆ	ಮೆ. ನಿರಾಣಿ ಶುಗರ್ಸ್ ಲಿ., ಮುಧೋಳ, ಬಾಗಲಕೋಟೆ ಜಿಲ್ಲೆ
8	ರೈತರ ಸಹಕಾರಿ ಸಕ್ಕರೆ ಕಾರ್ಖಾನೆ, ರನ್ನಾನಗರ ಮುಧೋಳ, ಬಾಗಲಕೋಟೆ ಜಿಲ್ಲೆ	ಮೆ.ಬೀಳಗಿ ಶುಗರ್ ಮಿಲ್ ಲಿ., ಬಾಡಗಂಡಿ, ಬಾಗಲಕೋಟೆ ಜಿಲ್ಲೆ.
9	ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಚುಂಚನಕಟ್ಟೆ ಕೆ.ಆರ್.ನಗರ ತಾ., ಮೈಸೂರು ಜಿಲ್ಲೆ	ಮೆ. ನಿರಾಣಿ ಶುಗರ್ಸ್ ಲಿ., ಮುಧೋಳ, ಬಾಗಲಕೋಟೆ ಜಿಲ್ಲೆ

Sugarcane (Control) Order 1966 ರ ಖಂಡ **9 ಮತ್ತು 9ಎ ರನ್ವಯ** ಸಕ್ಕರೆ ಕಾರ್ಖಾನೆಗಳಿಂದ ಮಾಹಿತಿಯನ್ನು ಕೋರಲು, ಸಕ್ಕರೆ ಕಾರ್ಖಾನೆಗಳ ಆವರಣವನ್ನು ಪ್ರವೇಶಿಸಲು, ಪರಿಶೀಲಿಸಲು ಮತ್ತು ಮುಟ್ಟುಗೋಲು ಹಾಕಿಕೊಳ್ಳಲು ಅಧಿಕಾರಿಯನ್ನು ಪ್ರಾಧಿಕಾರಿಸಲು ರಾಜ್ಯ ಸರ್ಕಾರವು ಅಧಿಕಾರವನ್ನು ಹೊಂದಿರುತ್ತದೆ.

ಈ ಹಿನ್ನೆಲೆಯಲ್ಲಿ, ರಾಜ್ಯದ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ದೀರ್ಘಾವಧಿಗೆ ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ಗುತ್ತಿಗೆ ಒಪ್ಪಂದದ ಷರತ್ತು ಮತ್ತು ನಿಬಂಧನೆಗಳನ್ನು ಅನುಪಾಲನೆ ಮಾಡಿರುವ ಕುರಿತು ಪರಿಶೀಲಿಸಲು ವಿಚಾರಣಾ ಸಮಿತಿಯನ್ನು ನೇಮಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಐ 43 ಸಿಓಎಫ್ 2026,

ಬೆಂಗಳೂರು, ದಿನಾಂಕ: 31ನೇ ಮಾರ್ಚ್ 2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುವ 09 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ದೀರ್ಘಾವಧಿಗೆ ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ಗುತ್ತಿಗೆ

ಒಪ್ಪಂದದಲ್ಲಿನ ಷರತ್ತು ಮತ್ತು ನಿಬಂಧನೆಗಳನ್ನು ಅನುಪಾಲನೆ ಮಾಡಿರುವ / ಉಲ್ಲಂಘನೆ ಮಾಡಿರುವ ಬಗ್ಗೆ ಕೂಲಕಂಷವಾಗಿ ಪರಿಶೀಲಿಸಿ, ಸ್ಪಷ್ಟ ಅಭಿಪ್ರಾಯದೊಂದಿಗೆ ಕಾರ್ಖಾನೆವಾರು ವರದಿಯನ್ನು ಸಲ್ಲಿಸಲು ಈ ಕೆಳಕಂಡ ಅಧ್ಯಕ್ಷರು ಮತ್ತು ಸದಸ್ಯರನ್ನೊಳಗೊಂಡಂತೆ ವಿಚಾರಣಾ ಸಮಿತಿಯನ್ನು ರಚಿಸಿ ಆದೇಶಿಸಿದೆ.

ಕ್ರಮ ಸಂಖ್ಯೆ	ಹೆಸರು ಮತ್ತು ಪದನಾಮ	ಹುದ್ದೆ
1	ಶ್ರೀ ಶೇಖರ್ ಗಾಯಕವಾಡ, ಭಾ.ಆ.ಸೇ (ನಿವೃತ್ತ) ಹಾಗೂ ನಿವೃತ್ತ ಸಕ್ಕರೆ ಆಯುಕ್ತರು, ಮಹಾರಾಷ್ಟ್ರ	ಅಧ್ಯಕ್ಷರು
2	ಶ್ರೀ ರಾಜೇಂದ್ರ ಚಾಂದಗುಡೆ, ಮುಖ್ಯಸ್ಥರು, ಶುಗರ್ಸ್ ಇಂಜಿನಿಯರಿಂಗ್ & ರಿನ್ಯೂವೇಬಲ್ ಎನರ್ಜಿ ಡಿಪಾರ್ಟ್‌ಮೆಂಟ್, ವಸಂತದಾದಾ ಶುಗರ್ ಇನ್ಸ್‌ಟಿಟ್ಯೂಟ್, ಪುಣೆ, ಮಹಾರಾಷ್ಟ್ರ	ಸದಸ್ಯರು
3	ಶ್ರೀ ಬಡಗಲಪುರ ನಾಗೇಂದ್ರ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ, ಮೈಸೂರು	ಸದಸ್ಯರು
4.	ಶ್ರೀ ಬಿ.ಎಸ್ ರಾಜಗೋಪಾಲ್, ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ	ಸದಸ್ಯರು
5	ಶ್ರೀ ಮುಜಾವರ ಬಹದೂರಲಿ ಇಬ್ರಾಹಿಂ, ಲಾತೂರು	ಸದಸ್ಯರು
6	ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವ ಆಯಾಯ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರು (DRCS)	ಸದಸ್ಯರು
7	ಶ್ರೀ ಸಿ.ಬಿ ಪಾಟೀಲ, ತಾಂತ್ರಿಕ ಸಲಹೆಗಾರರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ	ಸದಸ್ಯ ಕಾರ್ಯದರ್ಶಿ

<u>ಷರತ್ತು ಮತ್ತು ನಿಬಂಧನೆಗಳು:-</u>

1. ಮೇಲ್ಕಂಡ ಸಮಿತಿಯು ಪ್ರತಿಯೊಂದು ಸಕ್ಕರೆ ಕಾರ್ಖಾನೆಗೆ ಭೇಟಿ ನೀಡಿ ಗುತ್ತಿಗೆ ಒಪ್ಪಂದದಲ್ಲಿನ ಷರತ್ತು ಮತ್ತು ನಿಬಂಧನೆಗಳನ್ನು ಪಾಲನೆ ಮಾಡಿರುವ ಕುರಿತು ಅಗತ್ಯ ದಾಖಲೆಗಳನ್ನು ಮತ್ತು ಸ್ಥಳ ಪರಿಶೀಲನೆಯನ್ನು ನಡೆಸತಕ್ಕದ್ದು.
2. ಮೇಲ್ಕಂಡ ಸಮಿತಿಗೆ ಅಗತ್ಯ ದಾಖಲೆಗಳನ್ನು / ಮಾಹಿತಿಗಳನ್ನು ಒದಗಿಸಿ ಸಂಬಂಧಪಟ್ಟ ಸಹಕಾರಿ ಸಕ್ಕರೆ ಕಾರ್ಖಾನೆಗಳ ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಂಬಂಧಿಸಿದ ಗುತ್ತಿಗೆದಾರರು ಅಗತ್ಯ ಸಹಕಾರವನ್ನು ನೀಡತಕ್ಕದ್ದು.
3. ಸದರಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರ ಪ್ರಯಾಣಕ್ಕೆ ಮತ್ತು ವಸತಿಗೆ ತಗಲುವ ವೆಚ್ಚಗಳನ್ನು ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿ ಇವರಿಂದ ಭರಿಸತಕ್ಕದ್ದು.
4. ಮೇಲ್ಕಂಡ ಸಮಿತಿಗೆ ಅಗತ್ಯ ದಾಖಲೆಗಳನ್ನು / ಮಾಹಿತಿಗಳನ್ನು ಸ್ಥಳಾವಕಾಶ ಹಾಗೂ ಅಗತ್ಯ ಸಿಬ್ಬಂದಿಯನ್ನು ಒದಗಿಸಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು
5. ಮೇಲ್ಕಂಡ ಸಮಿತಿಯು ಅಗತ್ಯ ದಾಖಲೆಗಳನ್ನು ಮತ್ತು ಸ್ಥಳ ಪರಿಶೀಲನೆಯನ್ನು ನಡೆಸಿದ ನಂತರ ಸ್ಪಷ್ಟ ಶಿಫಾರಸ್ಸಿನೊಂದಿಗೆ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು Sugarcane (Control) Order 1966 ರ ಖಂಡ 9 ಮತ್ತು 9ಎ ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಹಾಗೂ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ನೀಡಿರುವ ಅನುಮೋದನೆ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪವಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-128

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ಬೆಂಗಳೂರು ಈ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ :-
1. ಸರ್ಕಾರದ ಆದೇಶ ಸಂಖ್ಯೆ: ಸಿಒ 55 ಸಿಎಸ್ಆರ್ 2023 ಬೆಂಗಳೂರು, ದಿನಾಂಕ:15.03.2024, 21.01.2025, 15.07.2025 ಮತ್ತು 01.01.2026 ಹಾಗೂ ತಿದ್ದುಪಡಿ ಆದೇಶ ದಿನಾಂಕ:07.01.2026.
2. ಸಹಕಾರ ಸಂಘಗಳ ಉಪ ನಿಬಂಧಕರು, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ;ಡಿಆರ್‌ಬಿ-3/ಸಂ.ಸಂ/16/2023-24, ದಿನಾಂಕ:03.03.2026.

***

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1) ರ ಆದೇಶದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ವಿಜ್ಞಾನ ಭವನ, ನಂ.24/2, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು, ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ ಆದೇಶಿಸಲಾಗಿತ್ತು. ನಂತರ ಕಾಲಕಾಲಕ್ಕೆ ಅವಧಿಯನ್ನು ವಿಸ್ತರಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಈ ಸಂಘದ ಆಡಳಿತಾಧಿಕಾರಿಯವರು ದಿನಾಂಕ:09.02.2026ರಂದು ಮನವಿ ಸಲ್ಲಿಸಿ ಸರ್ಕಾರದ ಆದೇಶದನ್ವಯ ದಿನಾಂಕ:22.03.2024 ರಂದು ಆಡಳಿತಾಧಿಕಾರಿಯಾಗಿ ಸಂಘದ ಪ್ರಭಾರ ವಹಿಸಿಕೊಂಡಿದ್ದು, ಆಡಳಿತಾಧಿಕಾರಿ ಅವಧಿಯು ದಿನಾಂಕ:15.03.2026ಕ್ಕೆ ಮುಕ್ತಾಯಗೊಳ್ಳಲಿದೆ. ಸದರಿ ಆಡಳಿತಾಧಿಕಾರಿಯವರು ಸಹಕಾರ ಸಂಘಗಳ ಸಹಾಯಕ ನಿಬಂಧಕರು, 3ನೇ ವಲಯ, ಬೆಂಗಳೂರು ಕಚೇರಿಯಲ್ಲಿ ಮಾರಾಟಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು ಇದರೊಂದಿಗೆ ನ್ಯಾಷನಲ್ ಕೋ-ಆಪರೇಟಿವ್ ಡೇಟಾ ಬೇಸ್, ಪ್ಯಾಕ್ಸ್‌ಗಳ ಗಣಕೀಕರಣ, ರಾಜ್ಯ ಯೋಜನೆ, ಯಶಸ್ವಿನಿ ಯೋಜನೆ ಅನುಷ್ಠಾನ ಹಾಗೂ ಸಮಾಪನಾ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಸದರಿ ಸಂಸ್ಥೆಯ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸುವುದು ಕಷ್ಟ ಸಾಧ್ಯವಾಗಿರುತ್ತದೆಯೆಂದು ಹಾಗೂ ತಾವು ತಮ್ಮ ಪತ್ನಿಯವರಿಗೆ ಕ್ಯಾನ್ಸರ್‌ಗೆ ಚಿಕಿತ್ಸೆಯನ್ನು ಕೊಡಿಸುತ್ತಿದ್ದು, ಚಿಕಿತ್ಸೆ ನೀಡುತ್ತಿರುವ ವೈದ್ಯರು ಕಿಮೋ ಮತ್ತು ರೇಡಿಯೇಷನ್ ಚಿಕಿತ್ಸೆಯಿಂದ ಅಡ್ಡಪರಿಣಾಮವಾಗುವ ಸಾಧ್ಯತೆ ಹೆಚ್ಚಿರುವುದರಿಂದ ಸದರಿಯವರಿಗೆ ಹೆಚ್ಚು ಸಮಯ ನೀಡಿ ಅತ್ಯಂತ ಕಾಳಜಿ ವಹಿಸುವುದು ಅತ್ಯವಶ್ಯಕವಾಗಿರುತ್ತದೆ ಹಾಗೂ ಕನಿಷ್ಠ ಆರು ತಿಂಗಳವರೆಗೆ ಅತೀ ಸೂಕ್ಷ್ಮತೆಯಿಂದ ನೋಡಿಕೊಳ್ಳಬೇಕು ಎಂದು ಸೂಚಿಸಿದ್ದು, ವೈದ್ಯರ ಸೂಚನೆ ಮೇರೆಗೆ ಶ್ರೀಮತಿಯವರ ಆರೋಗ್ಯದ

ಬಗ್ಗೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕಾಗಿರುವುದರಿಂದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಆಡಳಿತಾಧಿಕಾರಿ ಹುದ್ದೆಯಿಂದ ಬದಲಾಯಿಸಿ ಬೇರೊಬ್ಬ ಅಧಿಕಾರಿ / ಸಿಬ್ಬಂದಿಯನ್ನು ಆಡಳಿತಾಧಿಕಾರಿಯಾಗಿ ನೇಮಿಸುವಂತೆ ಮಾನ್ಯ ಘನ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಕೋರಿರುವುದಾತಿ ತಿಳಿಸಿ ಆಡಳಿತಾಧಿಕಾರಿಯವರ ಮನವಿಯನ್ವಯ ಮತ್ತು ಪ್ರಸ್ತುತ ಸಂಘದ ಚುನಾವಣಾ ಪ್ರಕ್ರಿಯೆ ಬಾಕಿ ಇರುವುದರಿಂದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು ಇದರ ಆಡಳಿತಾಧಿಕಾರಿಯವರನ್ನು ಬದಲಿಸಿ, ಆಡಳಿತಾಧಿಕಾರಿ ಅವಧಿಯನ್ನು ಮುಂದಿನ 06 ತಿಂಗಳ ಅವಧಿಯವರೆಗೆ ವಿಸ್ತರಿಸಬೇಕೆಂದು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಸಂಘದ ಆಡಳಿತಾಧಿಕಾರಿ ಅವಧಿಯು ದಿನಾಂಕ:14.03.2026ಕ್ಕೆ ಮುಕ್ತಾಯಗೊಂಡಿರುವುದರಿಂದ ಉಪ ನಿಬಂಧಕರ ಶಿಫಾರಸ್ಸಿನಂತೆ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:15.03.2026 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿದೆ, ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 55 ಸಿಎಸ್‌ಆರ್ 2023
ಬೆಂಗಳೂರು, ದಿನಾಂಕ: 10ನೇ ಏಪ್ರಿಲ್ 2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ:ಸಿಒ 55 ಸಿಎಸ್‌ಆರ್ 2024, ದಿನಾಂಕ:15.03.2024ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ವಿಜ್ಞಾನ ಭವನ, ನಂ.24/2, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು ಈ ಸಂಘಕ್ಕೆ ಆಡಳಿತಾಧಿಕಾರಿಯನ್ನಾಗಿ ನೇಮಿಸಲಾಗಿದ್ದ ಶ್ರೀ ಹಮೀದ್ ಉಲ್ಲಾಖಾನ್, ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಬದಲಿಸಿ ಶ್ರೀ ಸೋಮಶೇಖರಯ್ಯ, ಸಹಕಾರ ಅಭಿವೃದ್ಧಿ ಅಧಿಕಾರಿ(ನಿ-32), ಉಪ ನಿಬಂಧಕರ ಕಚೇರಿ, 1ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರನ್ನು ನೇಮಿಸಿ ಆದೇಶಿಸಿದೆ.

ಮುಂದುವರೆದು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು ಈ ಸಂಘದ ಚುನಾವಣಾ ಪ್ರಕ್ರಿಯೆ ಬಾಕಿ ಇರುವುದರಿಂದ ಆಡಳಿತಾಧಿಕಾರಿಯವರ ಅವಧಿಯನ್ನು ದಿನಾಂಕ:15.03.2026 ರಿಂದ ಮುಂದಿನ 06 ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕಾಯ್ದೆ ಕಲಂ.25ರ ವಿಚಾರಣಾ ವರದಿಯಂತೆ ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-129

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 32 ಸಿಎಸ್ಆರ್ 2026

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಡಾ. ಬಿ.ಆರ್.ಅಂಬೇಡ್ಕರ್ ವೀಧಿ
ಬೆಂಗಳೂರು, ದಿನಾಂಕ:04.04.2026

ಮಾರ್ಪಾಡು ಆದೇಶ

ಸರ್ಕಾರದ ಆದೇಶ ಸಂಖ್ಯೆ:ಸಿಒ 32 ಸಿಎಸ್ಆರ್ 2026, ದಿನಾಂಕ:02.03.2026 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಸಿಟಿಜನ್ ವೆಲ್ಫೇರ್ ಸೊಸೈಟಿ, ನಂ.3403, 2ನೇ ಮುಖ್ಯರಸ್ತೆ, 9ನೇ ಕ್ರಾಸ್, ವಿಜಯನಗರ, 2ನೇ ಹಂತ, ಬೆಂಗಳೂರು ಈ ಸಂಘಕ್ಕೆ **ಶ್ರೀ ಎನ್.ಚಂದ್ರಶೇಖರ್, ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ, 2ನೇ ವಲಯ, ಬೆಂಗಳೂರು,** ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿರುವುದನ್ನು ಮಾರ್ಪಡಿಸಿ **ಶ್ರೀಮತಿ ಮಂಜುಳಾ ವಿ., ಅಧೀಕ್ಷಕರು, ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ 3ನೇ ವಲಯ(ನಿಯೋಜನೆ ಮೇಲೆ ಯಶಸ್ವಿನಿ ಟ್ರಸ್ಟ್)** ಇವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-130

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಚಿತ್ರದುರ್ಗ ಜಿಲ್ಲಾ ಯಾದವ ಗೊಲ್ಲರ ಸಂಘ(ರಿ), ಚಿತ್ರದುರ್ಗ ಈ ಸಂಘದ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂ. ಸಿಒ 90 ಸಿಎಸ್ಆರ್ 2025, ದಿನಾಂಕ: 27.03.2025 ಮತ್ತು 18.09.2025
2. ಸಹಕಾರ ಸಂಘಗಳ ಉಪ ನಿಬಂಧಕರು, ಚಿತ್ರದುರ್ಗ ಜಿಲ್ಲೆ, ಇವರ ಪತ್ರ ಸಂ: ಡಿಆರ್ಡಿ/ಸಂ-ಸಂ/ಸಿಆರ್-11-1968-69/2025-26 ದಿನಾಂಕ: 12.02.2026.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಆದೇಶದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಚಿತ್ರದುರ್ಗ ಜಿಲ್ಲಾ ಯಾದವ ಗೊಲ್ಲರ ಸಂಘ(ರಿ), ರಂಗಯ್ಯನಬಾಗಿಲು ಬಳಿ, ಚಿತ್ರದುರ್ಗ ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿ ಆದೇಶಿಸಲಾಗಿತ್ತು. ತದನಂತರ ದಿನಾಂಕ: 18.09.2025ರ ಆದೇಶದಲ್ಲಿ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ: 27.06.2025 ರಿಂದ ಮುಂದಿನ ಆರು ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (2) ರ ಪತ್ರದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 25 ರನ್ವಯ ನಡೆಸಿದ್ದ ವಿಚಾರಣಾ ವರದಿಯಲ್ಲಿ ಉಲ್ಲೇಖಿಸಿರುವ ಹಣ ಮತ್ತು ಅಧಿಕಾರ ದುರುಪಯೋಗದ ಬಗ್ಗೆ ಮರು ಲೆಕ್ಕಪರಿಶೋಧನೆಗೆ ಶ್ರೀ ಕೆ. ಚಂದ್ರಶೇಖರ್ ಮತ್ತು ಇತರರು ಮನವಿ ಮಾಡಿದ್ದು, ಮನವಿಯಂತೆ ಮರು ಲೆಕ್ಕ ಪರಿಶೋಧನೆಗೆ ಆದೇಶಿಸಿದ್ದು, ಇದಕ್ಕಾಗಿ ಕಾಲಾವಕಾಶ ಬೇಕಾಗಿರುವುದರಿಂದ ಆಡಳಿತಾಧಿಕಾರಿಯು ಕೋರಿರುವ ಮೇರೆಗೆ ಸಹಕಾರ ಸಂಘಗಳ ಉಪ ನಿಬಂಧಕರು, ಚಿತ್ರದುರ್ಗ ಜಿಲ್ಲೆ, ಇವರು ಆಡಳಿತಾಧಿಕಾರಿಯ ಅವಧಿಯನ್ನು ಮುಂದಿನ ಆರು ತಿಂಗಳಿಗೆ ವಿಸ್ತರಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ, ಸಂಘದ ಆಡಳಿತಾಧಿಕಾರಿಯ ಅವಧಿಯು ದಿನಾಂಕ: 26.03.2026ಕ್ಕೆ ಮುಕ್ತಾಯಗೊಳ್ಳಲಿರುವುದರಿಂದ ಉಪ ನಿಬಂಧಕರ ಶಿಫಾರಸ್ಸಿನಂತೆ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ: 27.03.2026 ರಿಂದ ಮುಂದಿನ 6 ತಿಂಗಳ ಅವಧಿಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಒ 90 ಸಿಎಸ್‌ಆರ್ 2025
ಬೆಂಗಳೂರು, ದಿನಾಂಕ:08.04.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27-ಎ ರನ್ವಯ ಚಿತ್ರದುರ್ಗ ಜಿಲ್ಲಾ ಯಾದವ ಗೊಲ್ಲರ ಸಂಘ(ರಿ), (ನೋಂದಣಿ ಸಂಖ್ಯೆ:11/1968-69), ರಂಗಯ್ಯನಬಾಗಿಲು ಬಳಿ, ಚಿತ್ರದುರ್ಗ, ಈ ಸಂಘದ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ: 27.03.2026 ರಿಂದ ಮುಂದಿನ 6 ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎ.ಸಿ. ದಿವಾಕರ್.)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

PR-131

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಈ ಸಂಘಕ್ಕೆ ನೇಮಿಸಿರುವ ಆಡಳಿತಾಧಿಕಾರಿಯ ಅವಧಿ ವಿಸ್ತರಣೆ ಕುರಿತು.

ಓದಲಾಗಿದೆ :-
1. ಸರ್ಕಾರದ ಆದೇಶ ಸಂಖ್ಯೆ:ಸಿಒ 281 ಸಿಎಸ್‌ಆರ್ 2025 ಬೆಂಗಳೂರು, ದಿನಾಂಕ: 30.09.2025, 30.12.2025 ಮತ್ತು 02.03.2026
2. ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ,ಬೆಂಗಳೂರು ನಗರ ಜಿಲ್ಲೆ ಇವರ ಪತ್ರ ಸಂಖ್ಯೆ:ಡಿಆರ್‌ಬಿ-2/ಸಂ.ಸಂಸ್ಥೆ/ಕಲಂ-25/04/2025-26, ದಿನಾಂಕ:04.03.2026

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಆದೇಶದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಕನ್ನಡ ಸಾಹಿತ್ಯ ಪರಿಷತ್ತು(ನೋಂದಣಿ ಸಂಖ್ಯೆ:328/1915-16), ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018, ಈ ಸಂಘಕ್ಕೆ ಶ್ರೀಮತಿ ಕೆ.ಎಂ. ಗಾಯಿತ್ರಿ, ಭಾ.ಆ.ಸೇ., ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಲಾಗಿದ್ದು, ತದನಂತರ ದಿನಾಂಕ: 29.12.2025ರಿಂದ ಮುಂದಿನ 03 ತಿಂಗಳ ಅವಧಿಗೆ ಅಥವಾ ಕಲಂ.25ರ ವಿಚಾರಣೆ ಪೂರ್ಣಗೊಳ್ಳುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಲಾಗಿತ್ತು. ನಂತರದಲ್ಲಿ, ದಿನಾಂಕ: 02.03.2026ರ ಆದೇಶದಲ್ಲಿ ಆಡಳಿತಾಧಿಕಾರಿಯನ್ನು ಬದಲಿಸಿ ಶ್ರೀ ಕೆ.ಎ.ದಯಾನಂದ ಭಾ.ಆ.ಸೇ., ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಇವರನ್ನು ನೇಮಿಸಲಾಗಿತ್ತು,

ಮೇಲೆ ಓದಲಾದ (2)ರ ಪತ್ರದಲ್ಲಿ ಸಹಕಾರ ಸಂಘಗಳ ಉಪನಿಬಂಧಕರು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಇವರು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಈ ಸಂಘದಲ್ಲಿನ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ-25ರಡಿ ನಡೆಸಲಾದ ವಿಚಾರಣಾ ವರದಿಯಲ್ಲಿನ ಒಟ್ಟು 17 ವಿಚಾರಣಾಂಶಗಳಲ್ಲಿ ವಿಚಾರಣಾಂಶ ಸಂಖ್ಯೆ:1 ರಿಂದ 10 ಮತ್ತು 12 ರಿಂದ 16 ವಿಚಾರಣಾಂಶಗಳು ಸಾಬೀತಾಗಿರುವುದಾಗಿ ಮತ್ತು ವಿಚಾರಣಾ ವರದಿಯಲ್ಲಿ ಒಟ್ಟು ರೂ.1,83,75,816/-ಹಣ ದುರುಪಯೋಗವಾಗಿರುವುದು ಸಾಬೀತುಗೊಂಡಿರುವ ಹಿನ್ನೆಲೆಯಲ್ಲಿ ಕನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 26 ರಡಿಯಲ್ಲಿ ಅಧಿಬಾರ ಪ್ರಕರಣವನ್ನು ಆಡಳಿತಾಧಿಕಾರಿಗಳು ಸಕ್ಷಮ ಪ್ರಾಧಿಕಾರದಲ್ಲಿ ದಾಖಲಿಸಿರುತ್ತಾರೆ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಬೈಲಾ ಸಂಖ್ಯೆ: 7(8) ಮತ್ತು 7(9)ರನ್ವಯ ಆಡಳಿತಾಧಿಕಾರಿಗಳು ನಿಕಟಪೂರ್ವ ಅಧ್ಯಕ್ಷರಿಗೆ ಕಾರಣ ಕೇಳುವ ನೋಟೀಸು ನೀಡಿ, ವಿಚಾರಣೆ ನಡೆಸಲು ಕ್ರಮವಹಿಸುತ್ತಿರುವುದರಿಂದ ಹಾಗೂ ಕಲಂ 25ರ ವಿಚಾರಣಾ ವರದಿಯ ಮೇಲೆ ಕ್ರಮಗಳು ಜರುಗಿಸಲಾಗುತ್ತಿರುವುದರಿಂದ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27(ಎ)ರನ್ವಯ ನೇಮಿಸಲಾಗಿರುವ ಆಡಳಿತಾಧಿಕಾರಿಗಳ ಅವಧಿಯನ್ನು ವಿಸ್ತರಿಸುವಂತೆ ಕೋರಿರುತ್ತಾರೆ.

ಸಹಕಾರ ಸಂಘಗಳ ಉಪನಿಬಂಧಕರು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಇವರು ಸಲ್ಲಿಸಿರುವ ವರದಿಯಂತೆ ಆಡಳಿತಾಧಿಕಾರಿಯ ಅವಧಿಯನ್ನು ಮುಂದಿನ 3 ತಿಂಗಳುಗಳವರೆಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಸರ್ಕಾರದ ಆದೇಶ ಸಂಖ್ಯೆ:ಸಿಒ 281 ಸಿಎಸ್‌ಆರ್ 2025
ಬೆಂಗಳೂರು, ದಿನಾಂಕ:31.03.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಈ ಸಂಘದ ಆಡಳಿತಾಧಿಕಾರಿಗಳ ಅವಧಿಯನ್ನು ದಿನಾಂಕ: 30.03.2026ರಿಂದ ಮುಂದಿನ 3 ತಿಂಗಳ ವರೆಗೆ ವಿಸ್ತರಿಸಿ ಆದೇಶಿಸಿದೆ. ಆಡಳಿತಾಧಿಕಾರಿಯು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಅನುಸಾರ ಅಗತ್ಯ ಕ್ರಮವಹಿಸಿ ಸಕ್ಷಮ ಪ್ರಾಧಿಕಾರಿ ಮತ್ತು ಸರ್ಕಾರಕ್ಕೆ ವರದಿ ನೀಡಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-132

ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 64 ಇಪಿಸಿ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:07.04.2026.

ಅಧಿಸೂಚನೆ

ಸರ್ಕಾರದ ಆದೇಶ ಸಂಖ್ಯೆ: ಅಪಜೀ 545 ಇಪಿಸಿ 2024, ದಿನಾಂಕ: 05.02.2025 ರನ್ವಯ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರನ್ನಾಗಿ ನಾಮನಿರ್ದೇಶಿಸಲಾಗಿರುವ ಶ್ರೀ ಪಿ.ಎಂ. ನರೇಂದ್ರ ಸ್ವಾಮಿ, ನಂ.305, ಪೂರಿಗಲಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಇವರಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 14 ಶಿಸನೇ 2025, ದಿನಾಂಕ :29.04.2025ರನ್ವಯ ರಾಜ್ಯ ಸಚಿವ ಸಂಪುಟ ದರ್ಜೆ ಸಚಿವರ ಸ್ಥಾನಮಾನವನ್ನು ನೀಡಿ ಆದೇಶಿಸಲಾಗಿದೆ.

ಅದರನ್ವಯ ಸದರಿಯವರಿಗೆ ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸರ್ಕಾರದ ಆದೇಶ ಸಂ. ಸಿಆಸುಇ 95 ಶಿಸನೇ 2020, ದಿನಾಂಕ:07.10.2020, ಸರ್ಕಾರದ ಅಧಿಸೂಚನೆ ಸಂ. ಸಂವ್ಯಶಾಇ 03 ಶಾಸನ 2022, ದಿನಾಂಕ 11.03.2022 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 28 ಶಾಸನ 2025, ದಿನಾಂಕ:04.04.2025 ರನ್ವಯ ರಾಜ್ಯ ಸಚಿವ ಸಂಪುಟ ದರ್ಜೆ ಸಚಿವರ ಸ್ಥಾನಮಾನಕ್ಕೆ ಅನ್ವಯಿಸುವ ಎಲ್ಲಾ ಸೌಲಭ್ಯ ಹಾಗೂ ಉಪಲಬ್ಧಗಳನ್ನು ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎನ್. ಆನಂದ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
(ಜೀವಿಪರಿಸ್ಥಿತಿ ಮತ್ತು ಪರಿಸರ)

PR-133

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

THAMMAIAH Digitally signed by THAMMAIAH